# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ.

(ನೊಂದಣಿ ಸಂಖ್ಯೆ : ಸನಿರಾ12/ವಿ-1/ನೊಂದಣಿ/2526/2014-15 ದಿ:17-07-2014.)

1ನೇ ಮಹಡಿ, ಶ್ರೀ ರಾಘವೇಂದ್ರ ಕಾಂಪ್ಲೆಕ್ಸ್, ಸಂತೋಷಿ ಮಾತಾ ದೇವಸ್ಥಾನ ರಸ್ತೆ, ಪಂಪಾ ಹೌಸಿಂಗ್ ಕಾಲೋನಿ,
ಮಾನವಿ-584123 ಜಿ॥ ರಾಯಚೂರು ದೂ॥ 08538-470321 www.shivapriyapssn.com

# 11ನೇ ಸಾಮಾನ್ಯ ಸಭೆಯ ಸೂಚನಾ ಪತ್ರ

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ.

**(ನೊಂದಣಿ ಸಂಖ್ಯೆ : ಸನಿರಾ12/ವಿ–1/ನೊಂದಣಿ/2526/2014–15 ದಿ:17–07–2014)**

**1ನೇ ಮಹಡಿ, ರಾಘವೇಂದ್ರ ಕಾಂಪ್ಲೆಕ್ಸ್, ಸಂತೋಷಿ ಮಾತಾ ದೇವಸ್ಥಾನ ರಸ್ತೆ, ಪಂಪಾ ಹೌಸಿಂಗ್ ಕಾಲೋನಿ,**

**ಮಾನವಿ–584123 ಜಿ॥ ರಾಯಚೂರು ದೂ॥ 08538–221199, www.shivapriyapssn.com**

## 11ನೇ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯ ಬಂಧುಗಳೇ,

ಸಹಕಾರಿಯ ಸನ್ 2024–25 ನೇ ಸಾಲಿನ ಸಹಕಾರಿಯ ಮಹಾಸಭೆಯನ್ನು **ದಿನಾಂಕ 26/07/2025** ರಂದು ಶನಿವಾರ ಬೆಳಿಗ್ಗೆ 11:00 ಗಂಟೆಗೆ ಸಹಕಾರಿಯ ಕಾರ್ಯಲಯದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ **ಶ್ರೀ ಜಾಕೀರ ಮೋಹಿಯುದ್ದಿನ್** ಇವರ ಅಧ್ಯಕ್ಷತೆಯಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುಲು ಸಭೆಯನ್ನು ಕರೆಯಲಾಗಿದೆ. ಕಾರಣ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಸರ್ವ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಂಡು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

## ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ವಿಷಯಗಳು

1. ಪ್ರಸಕ್ತ ಸಾಲಿನ (ಸನ್ 2024–25) 11 ನೇ ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದಾಖಲಿಸುವುದು.
2. ಸಹಕಾರಿಯ 10 ನೇ ವಾರ್ಷಿಕ ಮಹಾಸಭೆಯ ನಡುವಳಿಗಳನ್ನು ಓದಿ ದಾಖಲಿಸುವುದು ಮತ್ತು ಅನುಮೋದಿಸುವುದು.
3. ಸನ್ 2024–25 ನೇ ಸಾಲಿನ ವಾರ್ಷಿಕ ವರದಿಗೆ ಒಪ್ಪಿಗೆ ಕೊಡುವ ಬಗ್ಗೆ.
4. ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಓದಿ ಒಪ್ಪಿಗೆ ನೀಡುವುದು.
5. ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯ ಪರಿಗಣನೆ.
6. ಸನ್ 2024–25 ನೇ ಸಾಲಿನ ಆಯ–ವ್ಯಯ ಪತ್ರಿಕೆ ಹಾಗೂ ಅಢಾವೆ ಪತ್ರಿಕೆ ಒಪ್ಪಿಗೆ ನೀಡುವುದು.
7. ಸನ್ 2024–25 ನೇ ನಿವ್ವಳ ಲಾಭವನ್ನು ವಿಲೇವಾರಿ ಮಾಡುವ ಬಗ್ಗೆ.
8. ಸಹಕಾರಿಯ ಸನ್ 2025–26 ನೇ ಸಾಲಿಗೆ ಲೆಕ್ಕ ಪರಿಶೋಧಕರ ಹಾಗೂ ಅಂತರಿಕ ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಧಾರಣೆ ಬಗ್ಗೆ.
9. ಸನ್2025–26ನೇ ಸಾಲಿನ ಅಂದಾಜು ಮುಂಗಡ ಪತ್ರಿಕೆಗೆ ಒಪ್ಪಿಗೆ ನೀಡುವುದು.
10. ಹಿಂದಿನ ವರ್ಷದ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಸಭೆ ಅನುಮೋದನೆ ನೀಡುವ ಬಗ್ಗೆ.
11. ಉಪವಿಧಿ ತಿದ್ದುಪಡಿ ಕುರಿತು.
12. ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ ವಿವರ ವನ್ನು ಪರಿಗಣನೆಗೆ ತೆಗೆದುಕ್ಕೊಳ್ಳುವುದು. & ಅದರ ನಿರ್ಮಾಣದ ಬಗ್ಗೆ.
13. ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ, ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳ ಪಾವತಿಗಳ ಪರಿಗಣನೆ ಮತ್ತು ಸೇವಾ ನಿಯಮಗಳನ್ನು ಮತ್ತು ಇತರೆ ವ್ಯವಹಾರದ ನಿಯಮಗನ್ನು ಅನುಮೋದಿಸುವ ಬಗ್ಗೆ.
14. ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಅಂಗೀಕರಿಸುವ ಕುರಿತು.
15. ಸಹಕಾರಿಯ ಅಧ್ಯಕ್ಷರು ,ಉಪಾಧ್ಯಕ್ಷರು,ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಸಂಬಂದಿ ಸಿಬ್ಬಂದಿಗಳ ನೇಮಕವಾದ ಕುರಿತು.
16. ಸಹಕಾರಿಯ ಉಪವಿಧಿ ಸಂಖ್ಯೆ–32(2)ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳ ಬಗ್ಗೆ ಚರ್ಚೆ.
17. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

**ಆಡಳಿತ ಮಂಡಳಿ ಅಪ್ಪಣೆ ಮೇರೆಗೆ**
**ಎನ್.ಬಿ. ನವೀನ್‌ಕುಮಾರ್**
**ಮುಖ್ಯ ಕಾರ್ಯನಿರ್ವಣಾಧಿಕಾರಿ**

**ಸೂಚನೆಗಳು:**

1)ಮಹಾಸಭೆಯಲ್ಲಿ ಪ್ರಶ್ನೆ ಕೇಳ ಬಯಸುವವರು ಮಹಾಸಭೆಯ 7 ದಿನದ ಮುಂಚಿತವಾಗಿ ಸಹಕಾರಿಯ ಮುಖ್ಯಕಾರ್ಯನಿರ್ವಹಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ನೀಡಬೇಕು.

2)ಸಹಕಾರಿಯಿಂದ ಸಾಲ ಪಡೆದು, ಸುಸ್ತಿ ಬಾಕಿದಾರರಾದ ಸದಸ್ಯರು ಮಹಾಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚಿಸುವ ಅಧಿಕಾರವಿರುವುದಿಲ್ಲ.

3)ಸಹಾಕಾರಿ ಅಭಿವೃದ್ಧಿ ಕುರಿತು ಸಲಹೆ ಸೂಚನೆಗಳನ್ನು ನೀಡಲು ಸದಸ್ಯರಿಗೆ ಮುಕ್ತ ಅವಕಾಶ ನೀಡಲಾಗುವುದು.

4) ಸೌಹಾರ್ದ ಸಹಕಾರಿಯ ಕಾಯ್ದೆ ಹಾಗೂ ಉಪನಿಯಮಗಳ ಪ್ರಕಾರ ಸದಸ್ಯರು ಹಕ್ಕು ಚಲಾಯಿಸಲು ಸಹಕಾರಿಯಲ್ಲಿ ಕನಿಷ್ಠ ವ್ಯವಹಾರ ಮಾಡಿರಬೇಕು. ಹಾಗೂ ಈ ನಿಯಮಗಳೊಳಪಟ್ಟಿರುವ ಕಾಯ್ದೆ , ನಿಯಮ & ಉಪನಿಯಮಗಳು ಪಾಲಿಸಿರುಬೇಕು

# 11ನೇ  ವಾರ್ಷಿಕ ಸಾಮಾನ್ಯ ಸಭೆಯ ಟಿಪ್ಪಣಿಗಳು

**ವಿಷಯ 1:  ಪ್ರಸಕ್ತ ಸಾಲಿನ (ಸನ್ 2024–25 ನೇ) ಸಾಲಿನ 11 ನೇ  ಸಾಮಾನ್ಯ ಸಭೆಯ  ನೋಟೀಸನ್ನು ಓದಿ ದಾಖಲಿಸುವುದು.**

**ಟಿಪ್ಪಣಿ1:** ಸನ್ 2024–25 ನೇ ಸಾಲಿನ 11 ನೇ  ಸಾಮಾನ್ಯ ಸಭೆಯ  ನೋಟೀಸನ್ನು ಓದಿ ದಾಖಲಿಸಲು ಸಭೆಗೆ ಮಂಡಿಸಿದೆ.

**ವಿಷಯ2: ಹಿಂದಿನ ಸಾಲಿನ (ದಿನಾಂಕ: 14/09/2024 ರಂದು) ನಡೆದ ಸಹಕಾರಿಯ 10 ನೇ ಸಾಮಾನ್ಯ ಸಭೆಯ ನಡುವಳಿಗಳನ್ನು ಓದಿ ದಾಖಲಿಸುವುದು.**

**ಟಿಪ್ಪಣಿ2:** ದಿನಾಂಕ: 14/09/2024 ರಂದು ನಡೆದ ಸಹಕಾರಿಯ 10 ನೇ ವಾರ್ಷಿಕ  ಸಾಮಾನ್ಯ ಸಭೆಯ ನಡುವಳಿಗಳನ್ನು ಓದಿ ದಾಖಲಿಸಲು ಮಂಡಿಸಿದೆ. **(ಇದರ ವಿವರ ಪುಟ ಸಂಖ್ಯೆ 13 ರಿಂದ 23 ರಲ್ಲಿ ನೀಡಲಾಗಿದೆ)**

**ವಿಷಯ 3: ಸನ್ 2024–25 ನೇ ಸಾಲಿನ ವಾರ್ಷಿಕ ವರದಿಗೆ ಒಪ್ಪಿಗೆ ಕೊಡುವ ಬಗ್ಗೆ.**

**ಟಿಪ್ಪಣಿ3 :**

**ಸನ್ 2024–25 ನೇ ಸಾಲಿನ ವಾರ್ಷಿಕ ವರದಿ**

ಆತ್ಮೀಯ ಸಹಕಾರಿ ಬಂಧುಗಳೇ,

ತಮ್ಮೆಲ್ಲರಿಗೆ ತಿಳಿದಿರುವಂತೆ ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು 2014 ನೇ ಸಾಲಿನಲ್ಲಿ ಸ್ಥಾಪನೆಗೊಂಡು  ಮಾನವಿ ನಗರ ಹಾಗೂ 2015–16 ನೇ ಸಾಲಿನಿಂದ ಇಡೀ ರಾಯಚೂರು ಜಿಲ್ಲೆಯ ನಮ್ಮ ಸಹಕಾರಿಯ ಸದಸ್ಯರಿಗೆ ಸಹಕಾರಿಯಿಂದ ಸೇವೆಯನ್ನು ನೀಡುತ್ತಿದ್ದು ಹಾಗು 2018–19ನೇ ಸಾಲಿನಲ್ಲಿ **ರಾಯಚೂರು ಜಿಲ್ಲೆ ಸೇರಿದಂತೆ ಬಳ್ಳಾರಿ, ಕೊಪ್ಪಳ, ಯಾದಗೀರಿ, ಕಲಬುರಗಿ, ಜಿಲ್ಲೆಯನ್ನೊಳಗೊಂಡಿರುತ್ತದೆ, ಹಾಗೂ** 11 ನೇ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮುಂದಿಡಲು ಹರ್ಷಿಸುತ್ತೇನೆ.

**ಸಹಕಾರಿಯ ಪರಿಚಯ:**

1. ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು ಸನ್ 2014ನೇ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, ಇದರ ಕಾರ್ಯಕ್ಷೇತ್ರವು ಇಡೀ ರಾಯಚೂರು ಜಿಲ್ಲೆಯ ವ್ಯಪ್ತಿಯನ್ನು ಹೊಂದಿರುತ್ತದೆ. ನಮ್ಮ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಂತೆ ಕಾರ್ಯನಿರ್ವಹಿಸುತ್ತಿದೆ.
2. ಸಹಕಾರಿಯು ಸನ್ 2014–15 ನೇ ಸಾಲಿನಲ್ಲಿ ಆರಂಭವಾದಾಗ ಕೇವಲ ಮಾನವಿ ತಾಲೂಕಿನ (ಹೀರ & ಚಿಂಚರಗಿ ಹೋರತುಪಡಿಸಿ) ಕಾರ್ಯವ್ಯಾಪ್ತಿಯನ್ನು ಹೊಂದಿತ್ತು 2015–16 ನೇ ಸಾಲಿನಲ್ಲಿ ಸಂಪೂರ್ಣ ರಾಯಚೂರು ಜಿಲ್ಲೆಯ ನಂತರ 2018–19 ನೇ ಸಾಲಿನಲ್ಲಿ **ರಾಯಚೂರು ಜಿಲ್ಲೆ ಸೇರಿದಂತೆ ಬಳ್ಳಾರಿ, ಕೊಪ್ಪಳ, ಯಾದಗೀರಿ, ಕಲಬುರಗಿ, ಜಿಲ್ಲೆಯನ್ನೊಳಗೊಂಡಿರುತ್ತದೆ** ಕಾರ್ಯವ್ಯಾಪ್ತಿಯ ಅನುಮತಿಯೊಂದಿಗೆ ಸಹಕಾರಿಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.
3. ಸಹಕಾರಿಯ ಸನ್ 2017–18 ಸಾಲಿನಲ್ಲಿ ಶ್ರೀಮಾನ್ ದಿ॥ ಮಮತ ಬಸವರಾಜ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರ ಆಶಯದಂತೆ ಮಾನವಿಯ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಸೇವೆಯನ್ನು ಆರಂಭಿಸಲಾಗಿದೆ. ಹಾಗೂ ಸಹಕಾರಿಗೆ ಎಂದೆ ಸಹಕಾರಿಯ ಸ್ವಂತ ನಿವೇಶನವನ್ನು ಖರೀದಿಸಿರುತ್ತದೆ.
4. ಸಹಕಾರಿಯ ಸನ್ 2019–20 ಸಾಲಿನಲ್ಲಿ ಶ್ರೀಮಾನ್ ದಿ॥ ಮಮತ ಬಸವರಾಜ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರ ಆಶಯದಂತೆ ಸಹಕಾರಿಗೆ ಸ್ವಂತ ಕಟ್ಟಡ ಹೊಂದುವ ಉದ್ದೇಶವನ್ನು ಈಡೆರಿಸಲು ಸಹಕಾರಿಯು ಕೆ ಎಚ್ ಬಿ ಕಾಲೋನಿಯಲ್ಲಿ ಒಂದು ನಿವೇಶನವನ್ನು ಖರೀದಿಸಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.
5. **ಸಹಕಾರಿಯ ಧ್ಯೇಯ ಮತ್ತು ಉದ್ದೇಶ:**
   ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು ಕರ್ನಾಟಕ ಸೌಹಾರ್ದ ಕಾಯಿದೆ 1997ರ ಅನುಗುಣವಾಗಿ ಸಹಕಾರಿಯ ವ್ಯವಹಾರಗಳನ್ನು ಕೈಗೊಳ್ಳುವುದು. ಆರ್ಥಿಕವಾಗಿ ಹಿಂದುಳಿದವರಿಗೆ, ದುರ್ಬಲ ವರ್ಗದವರಿಗೆ, ವ್ಯಾಪಾರಿಗಳಿಗೆ ಅವರ ಆರ್ಥಿಕ ಮಟ್ಟ ಸುಧಾರಿಸುವಂತಹ ಗೃಹ ಕೈಗಾರಿಕೆ, ವ್ಯಾಪಾರ ಮುಂತಾದವುಗಳಿಗೆ ಸಾಲ ನೀಡುವುದು. ನೌಕರದಾರರಿಗೆ, ಉದ್ದಿಮೆದಾರರಿಗೆ, ಸ್ವಯಂ ಉದ್ಯೋಗಿಗಳಿಗೆ ಅವರವರ ಬೇಡಿಕೆಗೆ ಅನುಗುಣವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಲವನ್ನು ಕೊಡುವುದು. ಸದಸ್ಯರಿಂದ, ಶೇವಣಿ ಸಂಗ್ರಹಿಸುವುದು ಮತ್ತು ಸಂಸ್ಥೆಯ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಶುದ್ಧ ಹಸ್ತದಿಂದ ವ್ಯವಹರಿಸುವುದು ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿಯ ಧ್ಯೇಯ ಮತ್ತು ಉದ್ದೇಶವಾಗಿರುತ್ತದೆ.

6. **ಸಹಕಾರಿಯ ಪ್ರಗತಿ:**

ತಮ್ಮ ಸಹಕಾರಿಯು ಸಾಧಿಸಿದ ಪ್ರಗತಿಯು ತಮ್ಮೆಲ್ಲರ ಸೂಚನೆ ಮತ್ತು ಸಹಕಾರದ ಪ್ರತೀಕವಾಗಿದೆ. ಆರ್ಥಿಕ ಶುದ್ದತೆ ಹಾಗೂ ಆರ್ಥಿಕ ಭದ್ರತೆ ನಮ್ಮ ಸಹಕಾರಿಯಲ್ಲಿ ಇರುವುದರಿಂದ ಆರಂಭಿಕ ವರ್ಷಗಳಿಂದ ಉತ್ತಮ ಫಲಿತಾಂಶ ಬಂದಿದ್ದು. ಪ್ರಸಕ್ತ ಸನ್ 2024–25 ನೇ ಸಾಲಿನಲ್ಲಿ ಸಹಕಾರಿಯು ಠೇವಣಿ ಸಂಗ್ರಹಣೆ, ಸಾಲ ವಿತರಣೆ, ವಾರ್ಷಿಕ ವಹಿವಾಟು, ವಸೂಲಾತಿ ಹಾಗೂ ಲಾಭ ಗಳಿಕೆಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ. ಪ್ರಸ್ತುತ ಸಾಲಿನಲ್ಲಿ **ರೂ.82,58,420.37** ನಿವ್ವಳ ಲಾಭವನ್ನು ಗಳಿಸಿ ಸಹಕಾರಿಯು ಪ್ರಗತಿಯತ್ತ ಸಾಗುತ್ತಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಎನಿಸುತ್ತದೆ.

ಪರಸ್ಪರ ಸಹಕಾರ, ಹಿತಚಿಂತನೆ ಹಾಗೂ ಹಣಕಾಸಿನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಪ್ರಾರಂಭಿಸಲಾದ ನಮ್ಮ ನಿಮ್ಮ ಸಹಕಾರಿಯು ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಹೊಂದುತ್ತಾ ಬಂದಿರುವ ನಮ್ಮ ಸಹಕಾರಿಯು ರಾಯಚೂರು ಜಿಲ್ಲೆ ನಾಗರೀಕರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿ ಪ್ರಗತಿ ಪರ ಬೆಳವಣಿಗೆಯನ್ನು ಹೊಂದುತ್ತಲಿರುವದನ್ನು ವರದಿಯಲ್ಲಿ ಕಾಣಿಸಿದ ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ.

7. **ಸಹಕಾರಿಯಲ್ಲಿ ಸದಸ್ಯತ್ವದ ಹಾಗೂ ಶೇರು ಬಂಡವಾಳ ವಿವರ:**

ದಿನಾಂಕ 31–03–2025 ಕ್ಕೆ ಸಹಕಾರಿಯಲ್ಲಿ ಒಟ್ಟು 2471 ಸದಸ್ಯರು ಹಾಗೂ ಒಟ್ಟು ಷೇರು ಬಂದವಾಳ **ರೂ.73,60,300/–** ಇರುತ್ತದೆ.

8. **ಠೇವಣಾತಿಗಳು:**

ದಿನಾಂಕ 31–03–2025 ಕ್ಕೆ ಸಹಕಾರಿಯಲ್ಲಿ ಒಟ್ಟು ವಿವಿಧ ರೀತಿಯ ಠೇವಣಿಗಳ ಮೊತ್ತ **ರೂ.23,49,79,958/–** ರಷ್ಟಿರುತ್ತದೆ ಹಾಗೂ ಸಹಕಾರಿಯ ಕಳೆದ ಸಾಲಿಗೆ ಹೋಲಿಸಿದರೆ **ರೂ. 5,42,39,385/-** ಗಳಷ್ಟು ಠೇವಣಿಗಳು ಹೆಚ್ಚಾಗಿರುತ್ತದೆ. ಇದು ನಮ್ಮ ಸದಸ್ಯರಯ ನಮ್ಮ ಸಹಕಾರಿಯ ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಅಲ್ಲದೇ ಕರ್ನಾಟಕ ಸೌಹಾರ್ದ ಕಾಯ್ದೆಯ ಅನ್ವಯ ಎಲ್ಲಾ ಸದಸ್ಯರು ಸಹಕಾರಿಯಲ್ಲಿ ಖಾತೆಗಳನ್ನು ತೆರೆದು ವ್ಯವಹರಿಸಲು ಹಾಗೂ ತಮ್ಮ ಠೇವಣಿಗಳನ್ನು ಇಟ್ಟು ಸಹಕಾರಿಯ ಏಳ್ಗೆಯಲ್ಲಿ ಸಹಕರಿಸಿ ತನ್ಮೂಲಕ ಸಹಕಾರಿಯಿಂದ ದೊರೆಯುವ ವಿವಿಧ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳಲು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

9. **ದುಡಿಯುವ ಬಂಡವಾಳ :**

ದಿನಾಂಕ 31–03–2024 ಕ್ಕೆ ಸಹಕಾರಿಯ ದುಡಿಯುವ ಬಂಡವಾಳವು **ರೂ. 2,272.96** ಲಕ್ಷಗಳಷ್ಟಿತ್ತು ಹಾಗೂ ದಿನಾಂಕ 31–03–2025 ಕ್ಕೆ ದುಡಿಯುವ ಬಂಡವಾಳವು **ರೂ.2,775.78** ಲಕ್ಷಗಳಾಗಿದೆ.

10. **ಸಾಲ ಮತ್ತು ಮುಂಗಡಗಳು :**

ಸಹಕಾರಿಯ ಮೂಲ ಉದ್ದೇಶವಾದ ಪರಸ್ಪರ ಸಹಕಾರ–ಪರಸ್ಪರ ಅಭಿವೃದ್ಧಿಗೆ ಅನುಗುಣವಾಗಿ ಸಹಕಾರಿಯು ಈ ಸಾಲಿನಲ್ಲಿಯೂ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಸಾಲವನ್ನು ನೀಡಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಸಾಲ ಮತ್ತು ಮುಂಗಡಗಳು **ರೂ. 18,97,43,302/-** ಇರುತ್ತವೆ ಪ್ರಸಕ್ತ ಸಾಲಿನಲ್ಲಿ ಸಹಕಾರಿಯ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರ ಪರಿಶ್ರಮದಿಂದಾಗಿ ಸಹಕಾರಿಯು ವಸೂಲಾತಿಯಲ್ಲಿ ಶೇ.**98.16%** ರಷ್ಟು ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

11. **ಹೂಡಿಕೆಗಳು :**

ದಿನಾಂಕ 31–03–2025 ಕ್ಕೆ ಸಹಕಾರಿಯು ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕನಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ. 217.93 ಲಕ್ಷಗಳು ಮತ್ತು ಆರ್ ಡಿ ಸಿ ಸಿ ಬ್ಯಾಂಕ್ ರಾಯಚೂರು ಬಂಗಿಕುಂಟ ಶಾಖೆ ಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ.50.00 ಲಕ್ಷಗಳು , ಸುಕೊ ಬ್ಯಾಂಕ್ ಮಾನವಿ ಶಾಖೆಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ.129.18 ಲಕ್ಷಗಳು , ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನವಿ ಶಾಖೆಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ.60.25 ಲಕ್ಷಗಳು ಹಾಗೂ ವಿಕಾಸ ಬ್ಯಾಂಕನಲ್ಲಿ(ಸಿಂಧನೂರ್ ಶಾಖೆ) ಮುದ್ದತ್ ಠೇವಣಿ ರೂಪದಲ್ಲಿ ರೂ. 203.71 ಲಕ್ಷಗಳು ಮತ್ತು ಇ–ಸ್ಟಾಂಪಿಂಗ ನ ಭದ್ರತ ಠೇವಣಿಯಲ್ಲಿ ರೂ.50,000/– ಹಾಗೂ ಆರ್.ಡಿ.ಸಿ.ಸಿ.

ಬ್ಯಾಂಕಿನಲ್ಲಿ ರೂ.25,000/– ಶೇರು ಹಾಗೂ ಜಿಲ್ಲಾ ಸೌಹಾರ್ದ ಒಕ್ಕೂಟದಲ್ಲಿ ರೂ.10,000/– ಶೇರು ರಂತೆ, ಒಟ್ಟಾರೆ ರೂ.660.05 ಲಕ್ಷಗಳಷ್ಟು ತೊಡಗಿಸಲಾಗಿದೆ.

**12. ಲೆಕ್ಕ ತಪಾಸಣೆ:**

ಸಹಕಾರಿಯ ಲೆಕ್ಕ ಪತ್ರಗಳು ದಿನಾಂಕ 31–03–2025 ರವರೆಗೆ ತಪಾಸಣೆ ಗೋಂಡಿದ್ದು ಸಹಕಾರಿಯು **"ಎ"** ವರ್ಗದಲ್ಲಿ ವರ್ಗೀಸಲ್ಪಟ್ಟಿದೆ. ಸನ್ 2024–25 ನೇ ಸಾಲಿನಲ್ಲಿ ಲೆಕ್ಕ ತಪಾಸಣೆ ವರದಿಯಲ್ಲಿ ಯಾವೂದೇ ನ್ಯೂನ್ಯತೆ ಕಂಡುಬಾರದ ಕಾರಣ ಆಢಳಿತ ಮಂಡಳಿಯು ಅನುಪಾಲನಾ ವರದಿ ನೀಡಿರುವುದಿಲ್ಲ. ಸನ್ 2024–25 ನೇ ಸಾಲಿನ ಶಾಸನ ಬದ್ದ ಲೆಕ್ಕ ತಪಾಸಣೆಯನ್ನು ಲೆಕ್ಕ ಪರಿಶೋಧಕರು **ಶ್ರೀನಿವಾಸ ನೆಲಜೇರಿ & ಕಂ., ಹೊಸಪೇಟೆ, ಸಿ. ಎ. ಶ್ರೀನಿವಾಸ ನೆಲಜೇರಿ, ಸನ್ನದು ಲೆಕ್ಕ ಪರಿಶೋಧಕರು, ಹೊಸಪೇಟೆ,** ಇವರು ಲೆಕ್ಕ ಪರಿಶೋಧನೆಯನ್ನು ಮಾಡಿ ಯೋಗ್ಯ ಮಾರ್ಗದರ್ಶನವನ್ನು ನೀಡಿರುತ್ತಾರೆ.

**13. ಸಭೆಗಳು:**

ವರದಿ ಸಾಲಿನಲ್ಲಿ 11 ಆಡಳಿತ ಮಂಡಳಿಯ ಸಭೆಗಳು ನಡೆದಿವೆ. ಈ ಎಲ್ಲಾ ಸಭೆಗಳಲ್ಲಿನ ನಿರ್ಣಯಗಳನ್ನು ಸಭೆ ಪರಿಶೀಲಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**14. ಲಾಭ ಗಳಿಕೆ ಹಾಗೂ ವಿತರಣೆ:**

ಸನ್ 2024–2025ನೇ ಸಾಲಿನಲ್ಲಿ **ರೂ.82,58,420/–** ಲಾಭ ಗಳಿಸಿದೆ. ಇದು ಸಹಕಾರಿಯ ಸದಸ್ಯರು ತೋರಿಸಿದ ವಿಶ್ವಾಸ, ಸಹಕಾರ ಹಾಗೂ ಸಿಬ್ಬಂದಿ/ನಿರ್ದೇಶಕ ಮಂಡಳಿಯವರ ಅವಿರತ ಶ್ರಮದ ಫಲ ಎಂದು ತಿಳಿಸಲು ನನಗೆ ಅತೀವ ಸಂತೋಷವಾಗುತ್ತದೆ ಹಾಗೂ ಈ ವರದಿ ಸಾಲಿನಲ್ಲಿ ಸಹಕಾರಿಯ ಉಪನಿಯಮ 80 ರ ಪ್ರಕಾರ ಸನ್ 2024–25 ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ನಿವ್ವಳ ಲಾಭವನ್ನು ವಿಭಜನೆ ಮಾಡಬೇಕಾಗಿದ್ದು, ಈ ಕೇಳಗಿನಂತೆ ಆಢಳಿತ ಮಂಡಳಿ ಸಭೆಯಲ್ಲಿ ವಿಭಜನೆ ಮಾಡಿ ಮಹಾಸಭೆಗೆ ಶಿಫಾರಸ್ಸು ಮಾಡಿದ್ದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ವಿಷಯ 4: ಸನ್ 2024–25 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಓದಿ ಒಪ್ಪಿಗೆ ನೀಡುವದು.**

**ಟಿಪ್ಪಣಿ4:** ಸನ್ 2024–25 ನೇ ಸಾಲಿನ **11** ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿ **ಶ್ರೀನಿವಾಸ ನೆಲಜೇರಿ & ಕಂ., ಹೊಸಪೇಟೆ, ಸಿ. ಎ. ಶ್ರೀನಿವಾಸ ನೆಲಜೇರಿ, ಸನ್ನದು ಲೆಕ್ಕ ಪರಿಶೋಧಕರು, ಹೊಸಪೇಟೆ,** ಇವರು ನೀಡಿರುವ ಸನ್ 2024–25 ನೇ ಸಾಲಿನ ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಸಭೆಗೆ ಸಾದರ ಪಡಿಸಲಾಗುತ್ತಿದೆ ಇದನ್ನು ಸಭೆ ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೊದಿಸ ಬಹುದಾಗಿದೆ.

**ವಿಷಯ 5:ಸನ್ 2024–25 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯ ಪರಿಗಣನೆ.**

**ಟಿಪ್ಪಣಿ 5:** ಸನ್ 2024–25 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಸಭೆಗೆ ಸಾದರ ಪಡಿಸಲಾಗುತ್ತಿದೆ ಇದನ್ನು ಸಭೆ ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೋದಿಸ ಬಹುದಾಗಿದೆ ಹಾಗೂ ಲೆಕ್ಕಪರಿಶೋಧನ ವರದಿಗೆ ಆಢಳಿತ ಮಂಡಳಿಯು ಸಲ್ಲಿಸಿದ ಅನುಪಾಲನಾ ವರದಿಯನ್ನು ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೋದಿಸಬಹುದಾಗಿದೆ.

**ವಿಷಯ 6: ಸನ್ 2024–25 ನೇ ಸಾಲಿನ ಲೆಕ್ಕಪರಿಶೋಧಿತ ಲಾಭ ಹಾನಿ ಖಾತೆ ಹಾಗೂ ಅಢವೆ ಪತ್ರಿಕೆ ಓದಿ ಒಪ್ಪಿಗೆ ನೀಡುವುದು.**

**ಟಿಪ್ಪಣಿ 6:** ಸನ್ 2024–25 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧಿತ ಲಾಭ–ಹಾನಿ ಖಾತೆ ಹಾಗೂ ಅಢವೆ ಪತ್ರಿಕೆಗಳು ಈ ಕೆಳಗೆ ನೀಡಲಾಗಿದೆ

## ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ
## ತಾ.ಮಾನವಿ, ಜಿ: ರಾಯಚೂರು

### ದಿನಾಂಕ 01–04–2024 ರಿಂದ 31–03–2025 ರವರೆಗಿನ ಲಾಭ ಮತ್ತು ನಷ್ಟದ ತಃಖ್ತೆ

| | | | |
|---|---|---|---|
| ಬ್ಯಾಂಕ ಸಾಲಗಳ ಮೇಲೆ ಬಡ್ಡಿ ಕೊಟ್ಟದ್ದು | 12,96,366 | ಗುಂತಾವಣಿಗಳ ಮೇಲೆ ಬಂದ ಆದಾಯ | 42,19,152 |
| ಠೇವುಗಳ ಮೇಲೆ ಬಡ್ಡಿ ಕೊಟ್ಟದ್ದು | 2,03,49,625 | ಸಾಲಗಳ ಮೇಲೆ ಬಂದ ಬಡ್ಡಿ | 3,37,47,581 |
| ಸಿಬ್ಬಂದಿ ವೆಚ್ಚಗಳು | 30,76,325 | ಇತರೆ ಆದಾಯ | 7,40,350 |
| ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು | 20,72,851 | | |
| ಅವಕಾಶಗಳು | 32,77,717 | | |
| ಸವಕಳಿ | 3,75,778 | | |
| ನಿವ್ವಳ ಲಾಭಾ 2024–25 | 82,58,421 | | |
| ಒಟ್ಟು | **3,87,07,083** | ಒಟ್ಟು | **3,87,07,083** |

## ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ
## ತಾ.ಮಾನವಿ, ಜಿ: ರಾಯಚೂರು

### ದಿನಾಂಕ 31–03–2025 ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತ:ಖೆ

| | | | |
|---|---|---|---|
| ಸದ್ಯಸರ ಷೇರು ಬಂಡವಾಳ | 73,60,300 | ನಗದು ಶಿಲ್ಕು | 11,40,263 |
| ಸಂಘದ ನಿಧಿಗಳು | 3,52,37,500 | ಬ್ಯಾಂಕು ಖಾತೆಗಳು | 2,43,98,615 |
| ಸದ್ಯಸರ ಠೇವಣಿಗಳು | 23,49,79,958 | ಹೂಡಿಕೆಗಳು | 6,60,49,934 |
| ಅವಕಾಶಗಳು | 34,62,808 | ಸದ್ಯಸರ ಸಾಲಗಳು | 18,97,43,302 |
| | | ಚರಾಸ್ತಿಗಳು | 26,43,064 |
| | | ಸ್ಥಿರಾಸ್ತಿಗಳು | 52,18,570 |
| ನಿವ್ವಳ ಲಾಭ 2024–25 | 82,58,420 | ಇತರೆ ಮುಂಗಡ | 1,05,238 |
| ಒಟ್ಟು | **28,92,98,986** | ಒಟ್ಟು | **28,92,98,986** |

For Shivapriya Pattina Souharda Sahakari Sangha Niyamita, Manvi.
President

For Shivapriya Pattina Souharda Sahakari Sangha Niyamita, Manvi.
Vise-President

For Shivapriya Pattina Souharda Sahakari Sangha Niyamita, Manvi.
Director

For Shivapriya Pattina Souharda Sahakari Sangha Niyamita, Manvi.
Director

For Shivapriya Pattina Souharda Sahakari Sangha Niyamita, Manvi.
Director

For Shivapriya Pattina Souharda Sahakari Sangha Niyamita, Manvi.
Chief Executive Officer

## ಧೃಡೀಕರಣ ಪತ್ರ

ನಾನು, ಶ್ರೀನಿವಾಸ ನೆಲಜೇರಿ & ಕಂ., ಸನ್ನದು ಲೆಕ್ಕಪರಿಶೋಧಕರು ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ, ತಾ॥ ಮಾನವಿ, ಜಿ॥ ರಾಯಚೂರು ಇದರ 2024–25 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿರುತ್ತೇನೆ. ಲೆಕ್ಕಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿಯನ್ನು ಪಡೆದಿರುತ್ತೇನೆ ಹಾಗೂ ಅವುಗಳು ತೃಪ್ತಿಕರವಾಗಿರುವುದು ಕಂಡುಬರುತ್ತದೆ. ನನ್ನ ಜ್ಞಾನ ಹಾಗೂ ತಿಳಿವಳಿಕೆಗೊಳಪಟ್ಟು ಸಂಸ್ಥೆಯವರು ಹಾಜರುಪಡಿಸಿದ ದಾಖಲೆ ಹಾಗೂ ಮಾಹಿತಿಗಳನ್ವಯ ಲಗತ್ತಿಸಿರುವ ವಿವರವಾದ ವರದಿಗೊಳಪಟ್ಟು ಮೇಲ್ಕಂಡ ಲಾಭ–ನಷ್ಟ ಲೆಕ್ಕ ಹಾಗೂ ಅಡಾವೆ ಪತ್ರಿಕೆಯು ದಿನಾಂಕ 31–3–2025 ಕ್ಕೆ ಇದ್ದಂತೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಸರಿಯಾಗಿಯೂ ಹಾಗೂ ಕರಾರುವಕ್ಕಾಗಿಯೂ ಪ್ರಕಟಿಸುತ್ತದೆಂದೂ ದೃಢಿಕರಿಸುತ್ತೇನೆ.

SRINIVAS NELAJERI & CO. CHARTERED ACCOUNTANTS
Membership No:233892
FRN 024214S

ಶ್ರೀನಿವಾಸ ನೆಲಜೇರಿ & ಕಂ.
ಸನ್ನದು ಲೆಕ್ಕ ಪರಿಶೋಧಕರು
ಸಂಸ್ಥೆ ಸಂ. 024214S

ಇವುಗಳನ್ನು ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೋದಿಸಬಹುದಾಗಿದೆ.

**ವಿಷಯ7:ಸನ್ 2024–25 ನೇ ಸಾಲಿನಲ್ಲಿ ನಿವ್ವಳ ಲಾಭವನ್ನು ವಿಲೇವಾರಿ ಮಾಡುವ ಬಗ್ಗೆ.**

**ಟಿಪ್ಪಣಿ 7:** ಸನ್ 2024–25 ನೇ ಸಾಲಿನ ಸಹಕಾರಿಯ ನಿವ್ವಳ ಲಾಭವನ್ನು ವಿಲೇವಾರಿಯನ್ನು ಈ ಕೆಳಗೆ ನೀಡಲಾಗಿದೆ.

| ಕ್ರ,ಸಂ, | ವಿವರ | ಪ್ರತಿಶತ | ರೂಪಾಯಿ |
|---|---|---|---|
| 1, | ಕಾಯ್ದಿಟ್ಟ ನಿಧಿ | 25% | 20,64,605.00 |
| 2, | ಸಹಕಾರ ಶಿಕ್ಷಣ ನಿಧಿ | 2% | 1,65,168.00 |
| 3, | ಅನಿರೀಕ್ಷಿತ ನಷ್ಟಗಳು, ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣೆಗೆ ಮೀಸಲು ನಿಧಿ | 20% | 16,51,684.00 |
| 4, | ಸಮಾನ್ಯ ಕ್ಷೇಮ ನಿಧಿ | 5% | 4,12,921.00 |
| 5 | ಸಿಬ್ಬಂಧಿ ಕ್ಷೇಮ ನಿದಿ | 5% | 4,12,921.00 |
| 6 | ಕಟ್ಟಡ ನಿಧಿ | 20% | 16,51,684.00 |
| 7 | ಶಿವಪ್ರಿಯ ಸದಸ್ಯರ ಕ್ಷೇಮ ನಿಧಿ | 4% | 3,30,337.00 |
| 8 | ಸಹಕಾರ ಅಕಾಡೆಮಿ(ನೋಂ), ಮೈಸೂರು ಇದಕ್ಕೆ ಶೇ. 0.50; | 0.50% | 41,292.00 |
| 9 | ಸದಸ್ಯರಿಗೆ ಲಾಭಾಂಶ 16% | **16%** | 11,77,648.00 |
| 10 | ಸಹಕಾರಿಯ ವ್ಯವಹಾರ ಅಭಿವೃದ್ಧಿ ನಿಧಿ(4.24003%) | ಉಳಿದ ಭಾಗ | 3,50,160.37 |
| | **ಒಟ್ಟು ನಿವ್ವಳ ಲಾಭ ಸನ್ 2024–2025 ಕ್ಕೆ** | | **82,58,420.37** |
| | **ಸಿಬ್ಬಂದಿ ಬೋನಸ್ 31/03/2025 ಕ್ಕೆ ಪ್ರಾವಿಷನ್ ಮಾಡಲಾಗಿದ್ದು** | | 5,32,803.00 |

ಈ ವಿಲೇವಾರಿ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದಿಸಬಹುದಾಗಿದೆ.

**ವಿಷಯ 8: ಸಹಕಾರಿಯ ಸನ್ 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಧಾರಣೆ ಬಗ್ಗೆ.**

**ಟಿಪ್ಪಣಿ 8:** ಸನ್ 2025–26 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನೆ ಇಲಾಖೆಯ ಅನುಮೋದಿತ ಚಾರ್ಟೆಡ್ ಅಕೌಂಟೆಂಟ್ ಪಟ್ಟಿಯಲ್ಲಿರುವವರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಹಾಗೂ ಲೆಕ್ಕ ಪರಿಶೋಧಕರಿಗೆ ನೀಡಬಹುದಾದ ಸಂಭಾವನೆ ನಿರ್ದಾರಣೆ ಮಾಡುವ ಅಧಿಕಾರವನ್ನು ನಿರ್ದೇಶಕ ಮಂಡಳಿಯವರಿಗೆ ನೀಡಬೇಕೆಂದು ಮಹಾಸಭೆಯ ಅನುಮೋದನೆಗೆ ಮಂಡಿಸಲಾಗಿದೆ, ಸಭೆಯು ಪರಿಶೀಲಿಸಿ ಮಹಾಸಭೆಯಲ್ಲಿ ಅನುಮೋದಿಸಬಹುದಾಗಿದೆ.

**ವಿಷಯ 9: ಸನ್ 2025–26 ಸಾಲಿನ ಅಂದಾಜು ಮುಂಗಡ ಪತ್ರಿಕೆಗೆ ಒಪ್ಪಿಗೆ ನೀಡುವುದು.**

**ಟಿಪ್ಪಣಿ 9:** ಸನ್ 2025–26 ನೇ ಸಾಲಿನ ವಾರ್ಷಿಕ ಮುಂಗಡ ಪತ್ರಿಕೆಗೆ ವಿವರವನ್ನು ಅನುಭಂದ 1ರಲ್ಲಿ (ಪುಟ ಸಂ.12ರಲ್ಲಿ) ವಿವರಿಸಿದ್ದು. ಇದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ

ಈ ಅಂದಾಜು ಮುಂಗಡ ಪತ್ರಿಕೆಯನ್ನು ಪರಿಶೀಲಿಸಿ ಸಭೆಯು ಅನುಮೋದಿಸಬಹುದಾಗಿದೆ.

**ವಿಷಯ 10: ಹಿಂದಿನ ವರ್ಷದ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಸಭೆ ಅನುಮೋದನೆ ನೀಡುವ ಬಗ್ಗೆ.**

**ಟಿಪ್ಪಣಿ 10:** ಸನ್ 2024–25 ನೇ ಸಾಲಿನ ಹೆಚ್ಚುವರಿಯಾದ ವೆಚ್ಚಗಳನ್ನು ಅನುಭಂದ 1ರಲ್ಲಿ (ಪುಟ ಸಂ.12ರಲ್ಲಿ) ನೀಡಲಾಗಿದೆ ಪರಿಶೀಲಿಸಿ ಮಹಾಸಭೆಯು ಅನುಮೋದಿಸಬಹುದಾಗಿದೆ.

**ವಿಷಯ 11: ಸಹಕಾರಿಯ ಉಪವಿಧಿ ಸಮಗ್ರ ತಿದ್ದುಪಡಿ ಕುರಿತು.**

**ಟಿಪ್ಪಣಿ 11:** ಯಾವುದೆ ತಿದ್ದುಪಡಿ ಇರುವುದಿಲ್ಲ.

**ವಿಷಯ 12: ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ ವಿವರ ವನ್ನು ಪರಿಗಣನೆಗೆ ತೆಗೆದುಕ್ಕೊಳ್ಳುವುದು. & ಅದರ ನಿರ್ಮಾಣದ ಬಗ್ಗೆ.**

**ಟಿಪ್ಪಣಿ 12:** ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ್ದು ಇದರ ಬಗ್ಗೆ ಮುಂದಿನ ನಿರ್ಣಯಕ್ಕೆ ಸಭೆಯಲ್ಲಿ ಚರ್ಚೆಗೆ ಮಂಡಿಸಿದೆ. ಅದರ ನಿರ್ಮಾಣದ ಬಗ್ಗೆ ಸಭೆಯು ಚರ್ಚಿಸಿ ನಿರ್ಣಯಿಸಲು ಸಭೆಗೆ ಮಂಡಿಸಲಾಗಿದೆ ಹಾಗೂ ಸಹಕಾರಿಯ ಕಟ್ಟಡ ನಿಧಿಗೆ ಶೇ20% ನ್ನು ಸಹಕಾರಿಯ ಲಾಭದಲ್ಲಿ ವರ್ಗೀಕರಿಸಲು ಸಭೆಯ ಅನುಮೋದನೆಗೆ ಕೋರಲಾಗಿದೆ.

**ವಿಷಯ 13: ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ & ಸೇವಾ ನಿಯಮಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ 13:** ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ & ಸೇವಾ ನಿಯಮಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 14: ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಅಂಗೀಕರಿಸುವ ಕುರಿತು.**

**ಟಿಪ್ಪಣಿ 14:** ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಪರಿಶೀಲಿಸಿ ಸಹಕಾರಿಯ ಸದಸ್ಯರಿಗೆ ಅನುಕೂಲ ಮಾಡಿಕೊಡಲು ಹಾಗೂ ಪ್ರಸಕ್ತ ನಿಯಮಗಳನ್ನು ಪಾಲಿಸಲು ಸಭೆಗೆ ಮಂಡಿಸಲಾಗಿದ್ದು ಸಭೆಯು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**ವಿಷಯ 15:ಸಹಕಾರಿಯ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಸಂಭಂದಿ ಸಿಬ್ಬಂದಿಗಳ ನೇಮಕವಾದ ಕುರಿತು**

**ಟಿಪ್ಪಣಿ 15: ಅಂತಹ ಯಾವುದೇ ನೇಮಕಾತಿ ಆಗಿರುವುದಿಲ್ಲಾ.**

**ವಿಷಯ 16:ಸಹಕಾರಿಯ ಉಪವಿಧಿ ಸಂಖ್ಯೆ–32(2)ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳ ಬಗ್ಗೆ ಚರ್ಚೆ**

**ಟಿಪ್ಪಣಿ 16: ವಿಷಯವಾರು ಸಭೆಯಲ್ಲಿ ಚರ್ಚಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ.**

- ✓ **ಕಾರ್ಯಚರಣೆಯಲ್ಲಿ ಕೊರತೆ ಏನಾದರು ಇದ್ದಲ್ಲಿ ಅದರ ಪುನರಾವಲೋಕನ.**

  ಅಂತಹ ಕೊರತೆ ಯಾವುದು ಇರುವುದಿಲ್ಲ.

- ✓ **ದೀರ್ಘಾವಧಿಯ ಯೋಜನೆಗಳು ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಗಳ ಅನುಮೋದನೆ.**

  1) ಮುಂಬರುವ ದಿನಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡ ಕಟ್ಟಲು, ಅದಕ್ಕಾಗಿ ಕಾರ್ಯ ಯೋಜನೆ ರೂಪಿಸಲು ಮುಂದಿನ ಮೂರು ವರ್ಷಗಳ ದೀರ್ಘಾವಧಿಯ ಯೋಜನೆ ಮಾಡಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲು ಹಾಗೂ ಈ ಸಮಿತಿಗೆ ಸಹಕಾರಿಯ ಹೊಸ ಕಟ್ಟಡ ಕಟ್ಟಲು ಅದಕ್ಕೇ ರೂಪು–ರೇಷೆಯನ್ನು, ಕಟ್ಟಡದ ವಾಸ್ತವಿಕ ವೆಚ್ಚವನ್ನು ಅಂದಾಜಿಸಲು ಇದಕ್ಕೆ ಸಂಭಂದಿದಂತೆ ಕೆಲಸಕಾರ್ಯಗಳನ್ನು ನಿರ್ವಹಿಸಲು ಯೋಜನೆ ರೂಪಿಸಲು ಸಭೆಯ ಅನುಮೋದನೆ ಕೋರಿರುತ್ತದೆ.

  2) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಶಾಖೆಗಳನ್ನು ಆರಂಭಿಸಲು ಸಭೆಯ ಅನುಮೋದನೆಗೆ ಕೋರಿರುತ್ತದೆ.

  3) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಸಹಕಾರಿಯಿಂದ ಪೂರಕ ಸಂಸ್ಥೆಗಳನ್ನು ಆರಂಭಿಸಲು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಸಭೆಯ ಅನುಮೋದನೆಯನ್ನು ಕೋರುತ್ತದೆ.

- ✓ **ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳ ಸೃಜನೆ , ಮೀಸಲು ನಿಧಿ ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

  **ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi) ಪ್ರಕಾರ**

  ಎ) <u>ಮಿಸಲು ನಿಧಿ:</u> ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 25% ವನ್ನು ತೆಗೆದು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

  **<u>ಈ ನಿಧಿಯ ಬಳಕೆ:</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3) ರಂತೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxii) ಪ್ರಕಾರ ಬಳಸಬಹುದಾಗಿರುತ್ತದೆ. ಇದುವರೆಗೂ ಮೀಸಲು ನಿಧಿಯನ್ನು ಬಳಸಿರುವುದಿಲ್ಲ, ಮುಂಬರುವ ದಿನಗಳಲ್ಲಿ ಸೌಹಾರ್ದ ಕಾಯ್ದೆಯ ಪ್ರಕಾರ ಹಾಗೂ ಸಹಕಾರಿಯ ಉಪಪವಿಧಿಯ ಪ್ರಕಾರ ಸಹಕಾರಿಯ ಕಟ್ಟಡ ನಿರ್ಮಾಣಕ್ಕೆ ಶೇ.80% ರಷ್ಟನ್ನು ಬಳಸಲು ಸಭೆ ಅನುಮೋದನೆಗೆ ಕೋರಿದೆ.

  ಬಿ) **<u>ಸಹಕಾರ ಶಿಕ್ಷಣ ನಿಧಿ:</u>** ಸಹಕಾರಿಯು ಈ ನೀದಿಯನ್ನು ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ

  ಶೇ. 2% ನ್ನು ಈ ನಿಧಿಗೆ ವಿನಿಯೋಗ ಮಾಡುವುದು.

  **<u>ಈ ನಿಧಿಯ ಬಳಕೆ:</u>** ಈ ಸಹಕಾರ ಶಿಕ್ಷಣ ನಿಧಿಯನ್ನು ಸಹಕಾರಿಯ ಉಪವಿದಿ 76(1) ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ರೂಪಾದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ನಿಗದಿ ಪಡಿಸಿದ ಅವಧಿಯೊಳಗೆ ಪಾವತಿಸುವುದು.

  ಸಿ) **<u>ಅನಿರೀಕ್ಷಿತ ನಷ್ಟಗಳು, ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣೆಗೆ ಮೀಸಲು ನಿಧಿ</u>** : ಸಹಕಾರಿಯು ರಚಿಸಿದ ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 20% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3),75(1),75(2)ರಂತೆ ಬಳಸಬಹುದಾಗಿರುತ್ತದೆ.

ಡಿ) **<u>ಸಾಮಾನ್ಯ ಕ್ಷೇಮ ನಿಧಿ:</u>** ಸಹಕಾರಿಯು ರಚಿಸಿದ ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 5% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3),75(1),75(2),ರಂತೆ ಬಳಸಬಹುದಾಗಿರುತ್ತದೆ.

ಇ) **ಸಹಕಾರಿ ಅಕಾಡೆಮಿ ಮೈಸೂರ್ ನಿಧಿ:** ಸಹಕಾರಿಯು ರಚಿಸಿದ ಈ ನಿಧಿಗೆ ಪ್ರಸಕ್ತ ವಾರ್ಷಿದಿಂದ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 0.50% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ:</u>** ಈ ಸಹಕಾರಿ ಅಕಾಡೆಮಿ ಮೈಸೂರ್ ನಿಧಿಯನ್ನು ಸಹಕಾರಿಯು ಉಪವಿದಿ 76(1) ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ **ಸಹಕಾರಿ ಅಕಾಡೆಮಿ ಮೈಸೂರ್ ಸ್ಥಾಪಿಸಲು** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ ಸೂಚನೆಯಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ನಿಗದಿ ಪಡಿಸಿದಂತೆ ಪಾವತಿಸುವುದು.

ಎಫ್) 1) **<u>ನಿರ್ದೇಶಕರ ಕ್ಷೇಮ ನಿಧಿ:</u>** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬಿ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ಉಳಿದರೆ ಶೇ. 1% ನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 75(3)ರಂತೆ ಹಾಗೂ ನಿರ್ದೇಶಕರುಗಳ ಆರೋಗ್ಯ, ಇವರುಗಳ ಆರೋಗ್ಯ ವಿಮೆ ಮಾಡಿಸಲು, ನಿರ್ದೇಶಕರುಗಳ ಪ್ರವಾಸಕ್ಕೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

2) **<u>ಸಿಬ್ಬಂಧಿ ಕ್ಷೇಮ ನಿಧಿ :</u>** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬಿ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ಉಳಿದರೆ ಶೇ. 5% ವರೆಗೆ ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 75(3)ರಂತೆ ಹಾಗೂ ಸಿಬ್ಬಂದಿಗಳ ಆರೋಗ್ಯ, ಇವರುಗಳ ಆರೋಗ್ಯ ವಿಮೆ ಮಾಡಿಸಲು, ಸಿಬ್ಬಂದಿಗಳ ಪ್ರವಾಸಕ್ಕೆ ಮತ್ತು ಸಿಬ್ಬಂದಿಗಳ ಸಹಕಾರಿಯ ಉಪವಿಧಿಯ 63(1),63(2) ಕ್ಕೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

3) **<u>ಕಟ್ಟಡ ನಿಧಿ :</u>** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 72 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಶೇ 20% ನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.
**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2) ರಂತೆ ಬಳಸಬಹುದಾಗಿರುತ್ತದೆ.

4) **<u>ಶಿವಪ್ರಿಯ ಸದಸ್ಯರ ಕ್ಷೇಮ ನಿಧಿ :</u>** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬಿ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ನಂತರ ಉಳಿದರೆ ಪ್ರತೀ ವರ್ಷ ಸಹಕಾರಿಯ ಇತರೆ ನಿಧಿಗಳಲ್ಲಿ ವಿನಿಯೊಗವಾಗಿ ಉಳಿದ ಲಾಭವನ್ನು ಈ ನಿಧಿಗೆ ಶೇ. 0.25 % ರಿಂದ ಶೇ.5% ರೊಳಗೆ ಲಾಭವನ್ನು ವಿನಿಯೋಗ

ಮಾಡಲಾಗುವುದು ಹಾಗೂ ಸಹಕಾರಿಯ ಸದಸ್ಯರು ಸಾಲ ಪಡೆದ ಸಂದರ್ಬದಲ್ಲಿ ಸದಸ್ಯರ ಒಟ್ಟು ಸಾಲದ ಮೋತ್ತದ ಶೇ 0.05% ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2),74(3),75(2),ರಂತೆ ಹಾಗೂ ಸಹಕಾರಿಯ ಸದಸ್ಯರುಗಳ ಕಾಲಿಕ ಮರಣ ಹೊಂದಿದಲ್ಲಿ, ಅಥವಾ ಸದಸ್ಯನ ಸಾಮಾಜಿಕ ಜೀವನ ನಡೆಸಲು ದುಸ್ತರವಾದಲ್ಲಿ ಸಹಕಾರಿಯು ಇವರ ಸಾಲದ ಬಾಕಿ ಮೊತ್ತವು ರೂ.50,000/– ಒಳಗಿನ ಸಾಲಕ್ಕೆ ಈ ನಿಧಿಯಲ್ಲಿನ ಲಭ್ಯತೆಗನುಗುಣವಾಗಿ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

5) **ಸಹಕಾರಿಯ ವ್ಯವಹಾರ ಅಭಿವೃದ್ಧಿ ನಿಧಿ:** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬಿ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ನಂತರ ಉಳಿದರೆ ಪ್ರತೀ ವರ್ಷ ಸಹಕಾರಿಯ ಇತರೆ ನಿಧಿಗಳಲ್ಲಿ ವಿನೋಗವಾಗಿ ಉಳಿದ ಲಾಭವನ್ನು ಈ ನಿಧಿಗೆ ಶೇ 1% ರಿಂದ ಶೇ.2% ರೊಳಗೆ ಅಥವಾ ಉಳಿದ ಲಾಭದ ಭಾಗವನ್ನು ಲಾಭವನ್ನು ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2),74(3),75(2),ರಂತೆ ಹಾಗೂ ಸಹಕಾರಿಯ ವ್ಯವಹರ ಅಭಿವೃದ್ದಿಗೆ, ತಂತ್ರಜ್ಞಾನ ಅಳವಡಿಕೆಗೆ, ಸಹಕಾರಿಗೆ ಅನುಕೂಲವಾಗುವ ಯಾವುದೆ ಹೊಸ ಯೋಜನೆ ರೂಪುರೇಷಗಳಿಗೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

- ✓ **ಸಂಯುಕ್ತ ಸಹಕಾರಿಯ ಮಂಡಲಿಯ ನಿರ್ದೇಶಕರನ್ನು ತೆಗೆದುಹಾಕಿರುವುದರ ಮತ್ತು ಮಂಡಲಿಯು ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡಿರುವುದರ ಪರಿಗಣನೆ**
- ✓ **ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**

ಸಾಲ ಮತ್ತು ಮುಂಗಡಗಳ ನೀಡಿಗೆ ಸದಸ್ಯರುಗಳಿಗೆ ಸರ್ವತ್ರ ಮಿನಿ ಎಟಿಎಮ್ ನೊಂದಿಗಿನ ವ್ಯವಹಾರ, ಈ–ಸ್ಟಾಂಪಿಂಗ್ ಸೇವೆ ಗಳನ್ನು ನೀಡಲಾಗುತ್ತಿದ್ದು ಮುಂಬರುವ ದಿನಗಳಲ್ಲಿ **ಶಿವಪ್ರಿಯ ಜನತಾ ಬಜರ್** ಸ್ಥಾಪಿಸುವುದರ ಮುಖಾಂತರ ಸದಸ್ಯರಿಗೆ ದಿನನಿತ್ಯ ಅವಶ್ಯಕತೆಯ ವಸ್ತುಗಳನ್ನು ಮಾರುಕಟ್ಟೆಯ ಬೆಲೆ ಗಿಂತ ಅತೀ ಕಡಿಮೆ ದರದಲ್ಲಿ ದೊರಕುವಂತೆ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಇದನ್ನು ಸಭೆ ಪರಿಶೀಲಿಸಿ ಸಭೆ ಅನುಮೋದಿಸ ಬೇಕಾಗಿರುತ್ತದೆ.

- ✓ **ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲದ, ಸುಸ್ತಿ ಸಾಲದ ವಸೂಲಿ ಕ್ರಮದ ಪರಿಶೀಲನೆ.**

ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲಗಳು ಎಲ್ಲವೂ ಆಸ್ತಿ ಒತ್ತಿ ಸಾಲ, ವಾಹನ ಸಾಲ, ವಿಮಾ ಪಾಲಸಿ ಒತ್ತಿ ಸಾಲ ಮತ್ತು ಮುದ್ದತು ಠೇವಣಿ ಆಧಾರಿತ ಸಾಲಗಳಾಗಿದ್ದು ಇವುಗಳ ಪ್ರತೀ ನಿರ್ದೇಶಕರು ಶೇ.10% ಕ್ಕಿಂತ ಹೆಚ್ಚಿರುವುದಿಲ್ಲ ಹಾಗೂ ಈ ಎಲ್ಲಾ ಸಾಲಗಳು ನಿಯಮಿತ ಪಾವತಿಯನ್ನು ಹೋದಿದ್ದು ಸುಸ್ತಿಗಿರುವುದಿಲ್ಲ. ಇದನ್ನು ಸಭೆ ಪರಿಶೀಲಿಸಿ ಸಭೆ ಅನುಮೋದಿಸ ಬೇಕಾಗಿರುತ್ತದೆ.

- ✓ **ಸಹಕಾರಿ ಕಾಯ್ದೆ ಅನ್ವಯ ಇಂತಹ ಸುಸ್ತಿ ಸಾಲಗಳ ಮೇಲೆ ದಾವ ಹೂಡಲು ಸಭೆ ಪರಿಶೀಲಿಸಿ ಸಭೆ ಅನುಮೋದಿಸಿತು.**
- ✓ **ಸಹಕಾರಿಗಳ ಒಟ್ಟುಗೂಡಿಸುವಿಕೆ, ಸಹಕಾರಿಯ ವಿಭಜನೆ, ಇನ್ನೊಂದು ಅಥವಾ ಹೆಚ್ಚಿನ ಸಹಕಾರಿಗಳೊಡನೆ ಸಹಕಾರಿಯ ವಿಲೀನತೆ ಮತ್ತು ಸಹಕಾರಿಯ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ಪ್ರಸ್ತಾಪಗಳಿದ್ದಲ್ಲಿ ಪರಿಶೀಲನೆ**
- ✓ **ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.**
- ✓ **ಮಂಡಲಿಯ ನಿರ್ದೇಶಕರುಗಳನ್ನು ಹಾಜರಿದ್ದು ಮತ ನೀಡಿದ ಸದಸ್ಯರ ಮೂರನೇ ಎರಡರಷ್ಟು ಬಹುಮತದಿಂದ ತೆಗೆದುಹಾಕುವುದು.**
- ✓ **ಕಾಯ್ದೆ ಕಲಂ 35ರ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರಲ್ಲಿ ತೋರಿಸಲಾದ ದೋಷಗಳನ್ನು ಸರಿಪಡಿಸುವ ಮತ್ತು ಅಕ್ರಮಗಳನ್ನು ನೇರ್ಪಡಿಸುವ ಸಂಬಂಧದಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಂಡಲಿಯು ನೀಡಿರುವ ಅನುಸರಣಾ ವರದಿಯ ಪರಿಶೀಲನೆ.**
- ✓ **ಮಂಡಳಿಯ ನಿರ್ದೇಶಕರುಗಳನ್ನು ತೆಗೆದ ಹಾಕುವ ಕುರಿತು.**

ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

✓ **ಸಹಕಾರಿಯು ಇತರೆ ಬ್ಯಾಂಕಿನಲ್ಲಿ ಹೊಂದಿರುವ ಸದಸ್ಯತ್ವದ ವರದಿ.**

1) ಸಹಕಾರಿಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.
2) ಸಹಕಾರಿಯು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ, ರಾಯಚೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.
3) ಸಹಕಾರಿಯು ರಾಯಚೂರು ಜಿಲ್ಲಾ ಮದ್ಯವರ್ತಿ ಸಹಕರ ಬ್ಯಾಂಕ್ , ರಾಯಚೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.

✓ **ಕಾಯ್ದೆಯ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪರಿಶೀಲನೆ;**

✓ **ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ಮಂಡಳಿಯು ನಿರಾಕರಿಸಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ;**

–ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

✓ **ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ;**

–ಸಭೆಯು ನಿರ್ಣಯಕ್ಕೆ ಮಂಡಿಸಲಾಗಿದೆ.

✓ **ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವ ಅಂತ್ಯಗೊಂಡ ಬಗೆಗಿನ ಸಂಕ್ಷಿಪ್ತ ವರದಿಯ ಪರಿಶೀಲನೆ;**

–ಟಿಪ್ಪಣಿ 3ರಲ್ಲಿ ಮಾಹಿತ ನೀಡಲಾಗಿದೆ.

✓ **ಸಹಕಾರಿಯ ಸಮಾಪನೆ;**

–ಅಂತಹ ಯಾವುದೇ ಪ್ರಸ್ಥಾವನೆ ಇರುವುದಿಲ್ಲ.

✓ **ಕಾಯ್ದೆಯನ್ವಯ ನೋಂದಣಿಗೊಂಡ ಇತರೆ ಇಪ್ಪತ್ತು ಸಹಕಾರಿಗಳ ಜೊತೆ ಸೇರಿ 'ಒಕ್ಕೂಟ ಸಹಕಾರಿ' ಆರಂಭಿಸುವುದು ಹಾಗೂ ಅದಕ್ಕೆ ಷೇರು ಹಣ ಮತ್ತು ವ್ಯಾಪಾರ ವಹಿವಾಟಿಗೆ ಅಗತ್ಯ ಇತರ ಸೌಲಭ್ಯಗಳನ್ನು ಒದಗಿಸುವ ಪ್ರಸ್ತಾವನೆಗಳಿಗೆ ಅನುಮೋದಿಸುವುದು;**

✓ **ಕಾಯ್ದೆ ಪ್ರಕರಣ 14(2)ರ ಅನ್ವಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಹಕಾರಿಯೊಂದಿಗೆ ಸೇರಿ ಪಾಲುದಾರಿಕೆ ಸಂಸ್ಥೆಯನ್ನು ಆರಂಭಿಸುವುದು ಮತ್ತು ಇಂತಹ ಪಾಲುದಾರಿಕೆಗೆ ಪಾಲು ಹಣ ನೀಡುವುದು;**

✓ **ಕಾಯ್ದೆ ಪ್ರಕರಣ 15ರಂತೆ ಸಹಕಾರಿಯು ತನ್ನ ಉದ್ದೇಶದ ಈಡೇರಿಕೆಗಾಗಿ ಯಾವುದೇ ಪೂರಕ ಸಂಸ್ಥೆಗಳನ್ನು ಆರಂಭಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು;**

✓ **ಕಾಯ್ದೆ ಪ್ರಕರಣ 16ರನ್ವಯ ಸಾಮಾನ್ಯ ನಿಕಾಯದಯ ಅನುಮೋದನೆಯೊಂದಿಗೆ ತಮ್ಮ ಉದ್ದೇಶದ ಈಡೇರಿಕೆಗಾಗಿ ಯಾವುದೇ ಸಹೋದ್ಯಮವನ್ನು ಆರಂಭಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು ಮತ್ತು ಸಹೋದ್ಯಮದ ಕಾರ್ಯಾಚರಣೆಗೆ ಅಗತ್ಯವಿರುವ ಪಾಲು ಬಂಡವಾಳ, ಮತ್ತಿತರ ಸೌಲಭ್ಯಗಳನ್ನು ಒದಗಿಸುವುದು;**

✓ **ಮಂಡಲಿಯ ಸಲಹೆಯ ಮೇರೆಗೆ ಯೋಗ್ಯ ಪ್ರಕರಣಗಳಲ್ಲಿ ಮುಳುಗು ಮತ್ತು ಹೋಕು ಬಾಕಿ ಸಾಲವನ್ನು ವಜಾ ಮಾಡಲು ನಿರ್ಧರಿಸುವುದು;**

✓ **ಮಂಡಲಿಯು ಸದಸ್ಯರಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ಒದಗಿಸಲು ತೆಗೆದುಕೊಂಡ ಕ್ರಮದ ಮತ್ತು ಮುಂದಿನ ವರ್ಷಕ್ಕೆ ಆ ಬಗ್ಗೆ ತಯಾರಿಸಿದ ಕಾರ್ಯಕ್ರಮದ ಅವಲೋಕನ**

**ವಿಷಯ 17: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

**ಟಿಪ್ಪಣಿ 17:**

## ಅನುಬಂಧ–1

# ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಾನವಿ

### 2024–25 ನೇ ಸಾಲಿನ ಅಂದಾಜು ಆಯ–ವ್ಯಯ,2024–25 ನೇ ಸಾಲಿನ ನಿವ್ವಳ ಆಯ–ವ್ಯಯ, & 2025–26 ಸಾಲಿನ ಮುಂಗಡ ಆಯ–ವ್ಯಯ ಪ್ರತಿಕೆ

| ವೆಚ್ಚ | 2024–25 ನೇ ಸಾಲಿನ ಅಂದಾಜು ವೆಚ್ಚ | 2024–25 ನೇ ಸಾಲಿನ ನಿವ್ವಳ ವೆಚ್ಚ | 2025–26 ನೇ ಸಾಲಿನ ಅಂದಾಜು ವೆಚ್ಚ | ಆದಾಯ | 2024–25 ನೇ ಸಾಲಿನ ಅಂದಾಜು ಆಯ | 2024–25 ನೇ ಸಾಲಿನ ನಿವ್ವಳ ಆಯ | 2025–26 ನೇ ಸಾಲಿನ ಅಂದಾಜು ಆಯ |
|---|---|---|---|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 1,83,50,000 | 2,03,49,625 | 2,40,00,000 | ಬಡ್ಡಿ ಆದಾಯ | 2,95,00,000 | 3,37,47,581 | 3,72,00,000 |
| ಬ್ಯಾಂಕಿನಿಂದ ತೆಗೆದುಕೊಂಡ ಸಾಲಗಳ ಮೇಲಿನ ಬಡ್ಡಿ | 15,00,000 | 12,96,366 | 15,00,000 | ಗುಂತಾವಳಿಗಳ ಮೇಲೆ ಬಡ್ಡಿ ಆದಾಯ | 4000000 | 42,19,152 | 53,50,000 |
| ಸಹಕಾರಿಇನ್ಸೂರೆನ್ಸ್ | 25,000 | 15,936 | 25,000 | ಇತರ ಆದಾಯ | 700000 | 7,40,350 | 7,00,000 |
| ಪಿಗ್ಮಿ ಏಜೆಂಟರ ಕಮಿಷನ್ | 4,00,000 | 2,74,448 | 5,00,000 | | | | |
| ಬ್ಯಾಂಕ್ ಚಾರ್ಜಸ್ | 10,000 | 29,717 | 30,000 | | | | |
| ಇತರೆ ಖರ್ಚುಗಳು | 4,00,000 | 2,99,612 | 5,00,000 | | | | |
| ಸಿಬ್ಬಂದಿ ವೇತನ | 30,00,000 | 30,76,325 | 35,00,000 | | | | |
| ಮುದ್ರಣ ಮತ್ತು ಸ್ಟೇಷನರಿ | 1,50,000 | 1,28,841 | 1,50,000 | | | | |
| ಲೆಕ್ಕ ಪರಿಶೋಧನಾ ಶುಲ್ಕ | 75,000 | 75,000 | 1,50,000 | | | | |
| ದಿನಪತ್ರಿಕೆ ವೆಚ್ಚ | 6,500 | 4,795 | 6,500 | | | | |
| ವಿದ್ಯುತ್ ವೆಚ್ಚ | 1,30,000 | 74,193 | 1,30,000 | | | | |
| ಜಾಹಿರಾತು ವೆಚ್ಚ | 50,000 | 26,128 | 50,000 | | | | |
| ವಾರ್ಷಿಕ ಮಹಾ ಸಭೆಯ ವೆಚ್ಚ | 2,00,000 | 1,86,546 | 2,00,000 | | | | |
| ದೂರವಾಣಿ | 30,000 | 22,047 | 30,000 | | | | |
| ಅಂಚೆ ವೆಚ್ಚ | 25,000 | 5,371 | 25,000 | | | | |
| ಕಂಪ್ಯೂಟರ್ ವೆಚ್ಚ | 50,000 | 43,191 | 60,000 | | | | |
| ನಿರ್ದೇಶಕ ಮಂಡಳಿಯ ಸಭೆ ವೆಚ್ಚ | 50,000 | 37,300 | 70,000 | | | | |
| ನಿರ್ದೇಶಕ ಮಂಡಳಿಯ ಚುನಾವಣಾ ವೆಚ್ಚ | | 59,560 | | | | | |
| ಪ್ರವಾಸ ವೆಚ್ಚ/ಭತ್ಯೆ | 50,000 | 57,121 | 70,000 | | | | |
| ಸಹಕಾರಿಯ ವೃತ್ತಿ ತೆರಿಗೆ | 2,500 | 2,500 | 2,500 | | | | |
| ಸಹಕಾರಿಯ ಕಟ್ಟಡ ಬಾಡಿಗೆ ವೆಚ್ಚ | 3,30,000 | 3,03,468 | 3,60,000 | | | | |
| ಕಛೇರಿ ನಿರ್ವಹಣಾ ವೆಚ್ಚ | 1,00,000 | 93,318 | 8,00,000 | | | | |
| ಸಂಯುಕ್ತ ಸಹಕಾರಿಯ ವೆಚ್ಚ | 30,000 | 35,400 | 35,400 | | | | |
| ಪಿಗ್ಮಿಮಶೀನ್ ನಿರ್ವಹಣೆ ಖರ್ಚು | 25,000 | 9,830 | 25,000 | | | | |
| ಪೂಜಾ ಖರ್ಚು | 50,000 | 34,200 | 50,000 | | | | |
| ಸವುಕಳಿ | 4,00,000 | 3,75,778 | 4,00,000 | | | | |
| ಎ ಸಿ ನಿರ್ವಹಣಾ ವೆಚ್ಚ | 30,000 | 12,659 | 30,000 | | | | |
| ತೆರಿಗೆ ಸಲಹೆಗಾರರ ವೆಚ್ಚ | 50,000 | 41,600 | 1,00,000 | | | | |
| ಬ್ಯಾಂಕ ಸಾಫ್ಟವೇರ್ ವಾರ್ಷಿಕ ವೆಚ್ಚ | 24,000 | 23,600 | 24,000 | | | | |
| ಸಿಬ್ಬಂದಿ ಬೋನಸ್ | 5,00,000 | 5,10,000 | 5,50,000 | | | | |
| ಸಾಲ ವಸೂಲಾತಿ ಹಾಗೂ ವಾಹನ ನಿರ್ವಹಣೆ ವೆಚ್ಚ | 50,000 | 71,838 | 75,000 | | | | |
| ಸಿಬ್ಬಂದಿ ಭವಿಷ್ಯ ನಿಧಿ/ ಗ್ರಾಚುಟಿ ನಿಧಿ | 5,00,000 | 6,16,000 | 6,50,000 | | | | |
| ಜಿ ಎಸ್ ಟಿ ವೆಚ್ಚ | 50,000 | 15,787 | 50,000 | | | | |
| ಇನ್ವರ್ಟರ್ ಮೆಂಟೆನೆನ್ಸ್ | 20000 | | 2,00,000 | | | | |
| ಸಹಕಾರಿ ಕಟ್ಟಡ ನಿರ್ವಹಣಾ ವೆಚ್ಚ | 50,000 | 4,200 | 1,00,000 | | | | |
| ಮುಳುಗುವ ಸಾಲಗಳು | | 9,00,000 | | | | | |
| ವಿದ್ಯುತ್ ಸಾಮಗ್ರಿ ವೆಚ್ಚ | 20,000 | 23,443 | 26,600 | | | | |
| ಎಸ್ ಎಮ್ ಎಸ್ ವೆಚ್ಚ | 10,000 | 9,440 | 15,000 | | | | |
| ಪಿಎಫ್ ಖರ್ಚು | 37,000 | 19,072 | 50,000 | | | | |
| ಇಇಎಲ್ | 1,20,000 | 1,32,645 | 1,50,000 | | | | |
| ನಿರ್ದೇಶಕ ಪ್ರವಾಸ ವೆಚ್ಚ | | 51,763 | 60,000 | | | | |
| ಎನ್ ಪಿ ಎ | | 11,00,000 | | | | | |
| ಅಂದಾಜು ಲಾಭ | 73,00,000 | 82,58,420 | 85,00,000 | ಲಾಭ ನಷ್ಟ (ನಷ್ಟ) | | | |
| **ಒಟ್ಟು** | **3,42,00,000** | **3,87,07,083** | **4,32,50,000** | **ಒಟ್ಟು** | **3,42,00,000** | **3,87,07,083** | **4,32,50,000** |

## 2023–24 ನೇ ಸಾಲಿನ ವಿಷಯ 3 ರ ಟಿಪ್ಪಣಿ

## ಸನ್ 2023–24 ನೇ ಸಾಲಿನ ಸಹಕಾರಿಯ 10 ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳು

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಮಾನವಿ ಇದರ 10ನೇ ವಾಷಿಕ ಮಹಾಸಭೆಯನ್ನು ದಿನಾಂಕ 14–09–2024 ರಂದು ಬೆಳಿಗ್ಗೆ 11:00 ಘಂಟೆಗೆ ಸಹಕಾರಿ ಕಾರ್ಯಲಯದ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮಾನ್ **ಶ್ರೀ ಜಾಕೀರ್ ಮೋಹಿಯುದ್ದಿನ್** ರವರ ಅಧ್ಯಕ್ಷತೆಯಲ್ಲಿ ನಡೆಯಿತು, ಸಹಕಾರಿಯ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ನಡುವಳಿಕೆಗಳು ಈ ಕೆಳಗಿನಂತಿರುತ್ತವೆ.

**ಹಾಜರಿದ್ದ ಸದಸ್ಯರ ಸಂಖ್ಯೆ –218**

ಪ್ರಾರಂಭದಲ್ಲಿ ಸಹಕಾರಿಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಂದ ನೀಲಕಂಠೇಶ್ವರನಿಗೆ ಪೂಜೆ ನೆರವೇರಿಸಲಾಯಿತು, ನಂತರ, ಸಹಕಾರಿಯ ಸಿಬ್ಬಂದಿ ಕು॥ಶೃತಿ ಇವರಿಂದ ಪ್ರಾರ್ಥನೆಯೊಂದಿಗೆ ಸಭೆಯನ್ನು ಶುಭಾರಂಭಗೊಳಿಸಲಾಯಿತು, ಮೊದಲಿಗೆ ಶ್ರೀಅಶೋಕ್ ಕುಮಾರ್ ಸದಸ್ಯರು ಸಭೆಗೆ ಆಗಮಿಸಿದ ಆಡಳಿತ ಮಂಡಳಿಯ ನಿರ್ದೇಶಕರನ್ನು, ಸಹಕರಿಯ ಮಾನ್ಯ ಅಧ್ಯಕ್ಷರಾದ **ಶ್ರೀ ಜಾಕೀರ್ ಮೋಹಿಯುದ್ದಿನ್** ಮತ್ತು ಸಹಕಾರಿಯ ಉಪಾಧ್ಯಕ್ಷರಾದ **ಶ್ರೀ ಆರ್ ಶ್ರೀನಿವಾಸ್ ಶೆಟ್ಟಿ** ಹಾಗೂ ಹಿರಿಯ ನಿರ್ದೇಶಕರಾದ **ಆರ್ ವೆಂಕಯ್ಯ ಶೆಟ್ಟಿ ,ಶ್ರೀ ವೀರೇಶ್ ಸ್ವಾಮಿ ಆರ್ ಎಮ್., ನೀಲಕಂಠಪ್ಪ ಬಲ್ಲಟಗಿ, ಶಿವಮೂರ್ತಿ** ಹಾಗೂ ಸಹಕಾರಿಯ ಆಢಳಿತ ಮಂಡಳಿ ಹಾಗೂ ಸಹಕಾರಿಯ ಕಾನೂನು ಸಲಹೆಗಾರರಾದ **ಶ್ರೀ ಎ.ಎನ್. ರಾಜು,** ಹಿರಿಯ ವಕೀಲರು, ಮಾನವಿ ಹಾಗೂ ಸಹಕಾರಿಯ 2023–24 ನೇ ಸಾಲಿನ ಲೆಕ್ಕಪರಿಶೋಧಕರಾದ **ಶ್ರೀ ಸಿ.ಎ. ಶ್ರೀನಿವಾಸ್ ನೆಲಜೇರಿ, ಹೊಸಪೇಟೆ** ಹಾಗೂ ಸಹಕಾರಿಯ ಸರ್ವ ಸದಸ್ಯರನ್ನು ಹಾಗೂ ಪತ್ರಕರ್ತರನ್ನು ಸಹಕಾರಿಯ ಪರವಾಗಿ ಸ್ವಾಗತಿಸಿದರು.

ಸಹಕಾರಿಯ ನಿರ್ದೇಶಕರಾದ **,ಶ್ರೀ ವೀರೇಶ್ ಸ್ವಾಮಿ ಆರ್ ಎಮ್** ಅವರು ತಮ್ಮ ಪ್ರಸ್ತಾವಿಕ ಭಾಷಣ ಪ್ರಾರಂಭಿಸಿ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಮತ್ತೋಮ್ಮೆ ಸ್ವಾಗತವನ್ನು ಕೋರುತ್ತಾ ನಮ್ಮ ಸಹಕಾರಿಯು 10–08–2014ರಂದು ಪ್ರಾರಂಭಗೊಂಡಿರುತ್ತದೆ. ತಮ್ಮ ಸಹಕಾರಿಯು ಸಾಧಿಸಿದ ಪ್ರಗತಿಯು ತಮ್ಮೆಲ್ಲರ ಸೂಚನೆ ಮತ್ತು ಸಹಕಾರದ ಪ್ರತೀಕವಾಗಿದೆ, ಆರ್ಥಿಕ ಶುದ್ದತೆ ಹಾಗೂ ಆರ್ಥಿಕ ಭದ್ರತೆ ನಮ್ಮ ಸಹಕಾರಿಯಲ್ಲಿ ಇರುವುದರಿಂದ ಸಹಕಾರಿ ಆರಂಭಿಕ ವರ್ಷಗಳಿಂದಲು ಉತ್ತಮ ಫಲಿತಾಂಶ ಬಂದಿದ್ದು, ಹಾಗೂ ಪ್ರಸಕ್ತ ಸಾಲಿನ ಸಾಲಿನಲ್ಲಿ ಸಹಕಾರಿಯು ಠೇವಣಿ ಸಂಗ್ರಹಣೆ, ಸಾಲ ವಿತರಣೆ, ವಾರ್ಷಿಕ ವಹಿವಾಟು, ವಸೂಲಾತಿ ಹಾಗೂ ಲಾಭ ಗಳಿಕೆಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ. ಪ್ರಸ್ತುತ ಸಾಲಿನಲ್ಲಿ ರೂ. 70,60,134/– ನಿವ್ವಳ ಲಾಭವನ್ನು ಗಳಿಸಿ ಸಹಕಾರಿಯು ಪ್ರಗತಿಯತ್ತ ಸಾಗುತ್ತಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಎನಿಸುತ್ತದೆ.

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿಯು ಸನ್ 2014ನೇ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, ಇದರ ಕಾರ್ಯಕ್ಷೇತ್ರವು ಇಡೀ ರಾಯಚೂರು ಜಿಲ್ಲೆಯ ವ್ಯಪ್ತಿಯನ್ನು ಹೊಂದಿರುತ್ತದೆ. ನಮ್ಮ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಂತೆ ಕಾರ್ಯನಿರ್ವಹಿಸುತ್ತಿದೆ. ಸಹಕಾರಿಯು ಸನ್ 2014–15 ನೇ ಸಾಲಿನಲ್ಲಿ ಆರಂಭವಾದಾಗ ಕೇವಲ ಮಾನವಿ ತಾಲೂಕಿನ (ಹೀರ & ಚಿಂಚರಗಿ ಹೋರತುಪಡಿಸಿ) ಕಾರ್ಯವ್ಯಾಪ್ತಿಯನ್ನು ಹೊಂದಿತ್ತು 2015–16 ನೇ ಸಾಲಿನಲ್ಲಿ ಸಂಪೂರ್ಣ ರಾಯಚೂರು ಜಿಲ್ಲೆಯ ನಂತರ 2018–19 ನೇ ಸಾಲಿನಲ್ಲಿ **ರಾಯಚೂರು ಜಿಲ್ಲೆ ಸೇರಿದಂತೆ ಬಳ್ಳಾರಿ, ಕೊಪ್ಪಳ, ಯಾದಗೀರಿ, ಕಲಬುರಗಿ, ಜಿಲ್ಲೆಯನ್ನೊಳಗೊಂಡಿರುತ್ತದೆ** ಕಾರ್ಯವ್ಯಾಪ್ತಿಯ ಅನುಮತಿಯೊಂದಿಗೆ ಸಹಕಾರಿಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಸಹಕಾರಿಯ ಸನ್ 2017–18 ಸಾಲಿನಲ್ಲಿ ಶ್ರೀಮಾನ್ ದಿ॥ ಮಮತ ಬಸವರಾಜ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರ ಆಶಯದಂತೆ ಮಾನವಿಯ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ಸೇವಯನ್ನು ಆರಂಭಿಸಲಾಗಿದೆ. ಹಾಗೂ ಸಹಕಾರಿಯ ಸನ್ 2019–20 ಸಾಲಿನಲ್ಲಿ ಸಹಕಾರಿಗೆ ಎಂದೆ ಸಹಕಾರಿಯ ಸ್ವಂತ ನಿವೇಶನವನ್ನು ಖರೀದಿಸಿರುತ್ತದೆ ಹಾಗೂ **"ಕರ್ನಾಟಕ ರಾಜ್ಯ ಸರಕಾರವು ನಡೆಸುವ ಅಖಿಲ ಭಾರತ ಸಹಕಾರ ಸಪ್ತಾಹದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ–2023 ರಲ್ಲಿ ಉತ್ತಮ ಸಹಕಾರಿಯೆಂದು ಪ್ರಶಸ್ತಿ ನೀಡಿ ನಮ್ಮ ಸಹಕಾರಿಗೆ ಸನ್ಮಾನಿಸಿರುವುದು ನಮಗೆ ಹೆಮ್ಮಯ ವಿಷಯವಾಗಿದೆ."** ಹಾಗೂ ಮುಂಬರುವ ದಿನಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡವನ್ನು ಹೊಂದಲು ಹೆಚ್ಚಿನ ಶ್ರಮ ವಹಿಸಬೇಕೆಂದು ತಮ್ಮೆಲ್ಲರ ಸಹಾಯ ಕೊರುತ್ತೇನೆ.

ಪರಸ್ಪರ ಸಹಕಾರ, ಹಿತ ಚಿಂತನೆ ಹಾಗೂ ಹಣಕಾಸಿನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಪ್ರಾರಂಭಿಸಲಾದ ನಮ್ಮ ನಿಮ್ಮ ಸಹಕಾರಿಯು ಕಳೆದ ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಹೊಂದುತ್ತಾ ಬಂದಿರುವ ನಮ್ಮ ಸಹಕಾರಿಯು ಮಾನವಿ ನಾಗರೀಕರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿ ಪ್ರಗತಿ ಪರ ಬೆಳವಣಿಗೆಯನ್ನು ಹೊಂದುತ್ತಲಿರುವದನ್ನು ವರದಿಯಲ್ಲಿ ಕಾಣಿಸಿದ ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ನಿಸ್ವಾರ್ಥ ಸೇವೆ, ಆಡಳಿತದಲ್ಲಿ ಯಾವುದೇ ಹಸ್ತಕ್ಷೇಪವಿಲ್ಲದೆ, ಪ್ರಾಮಾಣಿಕವಾಗಿ

ಸಲಹೆ ಸೂಚನೆ ಸಹಕಾರ ನೀಡಿದ್ದೇವೆಂದರು, ಹೀಗೆ ಎಲ್ಲರಿಗೂ ನಮ್ಮ ಸಹಕಾರಿಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಧನ್ಯವಾದಗಳನ್ನು ತಿಳಿಸಿ, ಈ ಸಹಕಾರ ಸಂಬಂಧ ಮುಂಬರುವ ದಿನಗಳಲ್ಲಿಯೂ ಸಹ ಹಾಗೆಯೇ ಮುಂದುವರಿಯಲಿ ಎಂದು ಹಾರೈಸಿ ತಮ್ಮ ಪ್ರಾಸ್ತವಿಕ ಭಾಷಣವನ್ನು ಮುಕ್ತಾಯಗೊಳಿಸಿದರು.

**ನಂತರ ಸಭೆಯ ವಿಷಯ ಸೂಚಿ ಪ್ರಕಾರ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು**

**ವಿಷಯ1 :** ಇಂದಿನ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲಿಸುವುದು.

**ನಿರ್ಣಯ1:** ಸಹಕಾರಿಯ ಸನ್ 2023-24 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ 14/09/2024**ರಂದು ಶನಿವಾರ ಬೆಳಿಗ್ಗೆ 11:00 ಗಂಟೆಗೆ ಸಹಕಾರಿಯ ಕಾರ್ಯಲಯದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ **ಶ್ರೀ ಜಾಕೀರ್ ಮೋಹಿಯುದ್ದಿನ್** ಇವರ ಅಧ್ಯಕ್ಷತೆಯಲ್ಲಿ ಈ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುಲು ಸಹಕಾರಿಯ ಸರ್ವ ಸದಸ್ಯರಿಗೆ ಎಸ್.ಎಮ್.ಎಸ್ ಮುಖಾಂತರ & ದಿನಾಂಕ 31/08/2024 ರಂದು ಪತ್ರಿಕೆಯ ಮುಖಾಂತರ ಸಭೆಯನ್ನು ಕರೆಯಲಾಗಿತ್ತು ಇದನ್ನು ಮುಖ್ಯ ಕಾರ್ಯನಿರ್ವಹಕರು ಓದಿ ಹೇಳಿದರು ಹಾಗೂ ಈ ನೋಟೀಸನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ2:** ದಿನಾಂಕ 09-09-2023ರಂದು ನಡೆದ ಸಹಕಾರಿಯ 9ನೇ ವಾರ್ಷಿಕ ಮಹಾಸಭೆಯ ನಡುವಳಿಗಳನ್ನು ಓದಿ ದಾಖಲಿಸುವುದು.

**ನಿರ್ಣಯ2:** ದಿನಾಂಕ 09-09-2023ರಂದು ನಡೆದ ಸಹಕಾರಿಯ 9ನೇ ವಾರ್ಷಿಕ ಮಹಾಸಭೆಯ ನಡುವಳಿಗಳನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಓದಿ ಹೇಳಿದರು ಹಾಗೂ ಈ ನಡುವಳಿಗಳನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ3:** ಸನ್ 2023-24 ನೇ ಸಾಲಿನ ವಾರ್ಷಿಕ ಪ್ರಗತಿಯ ವರದಿಯನ್ನು ಓದಿ ಒಪ್ಪಿಗೆ ಕೊಡುವುದು.

**ನಿರ್ಣಯ3:** ಸನ್ 2023-24 ನೇ ಸಾಲಿನ ವಾರ್ಷಿಕ ಪ್ರಗತಿಯ ವರದಿಯನ್ನು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಓದಿ ಹೇಳಿದರು ಹಾಗೂ ಈ ನಡುವಳಿಗಳನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ಸನ್ 2023-24 ನೇ ಸಾಲಿನ ವಾರ್ಷಿಕ ಪ್ರಗತಿಯ ವರದಿ ಈಕೆಳಗಿನಂತೆ ಇದೆ.**

**ಸಹಕಾರಿಯ ಪರಿಚಯ:**

1. ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿಯು ಸನ್ 2014ನೇ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, ಇದರ ಕಾರ್ಯಕ್ಷೇತ್ರವು ಇಡೀ ರಾಯಚೂರು ಜಿಲ್ಲೆಯ ವ್ಯಾಪ್ತಿಯನ್ನು ಹೊಂದಿರುತ್ತದೆ. ನಮ್ಮ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಂತೆ ಕಾರ್ಯನಿರ್ವಹಿಸುತ್ತಿದೆ.
2. ಸಹಕಾರಿಯು ಸನ್ 2014-15 ನೇ ಸಾಲಿನಲ್ಲಿ ಆರಂಭವಾದಾಗ ಕೇವಲ ಮಾನವಿ ತಾಲೂಕಿನ (ಹೀರ & ಚಿಂಚರಗಿ ಹೋರತುಪಡಿಸಿ) ಕಾರ್ಯವ್ಯಾಪ್ತಿಯನ್ನು ಹೊಂದಿತ್ತು 2015-16 ನೇ ಸಾಲಿನಲ್ಲಿ ಸಂಪೂರ್ಣ ರಾಯಚೂರು ಜಿಲ್ಲೆಯ ನಂತರ 2018-19 ನೇ ಸಾಲಿನಲ್ಲಿ **ರಾಯಚೂರು ಜಿಲ್ಲೆ ಸೇರಿದಂತೆ ಬಳ್ಳಾರಿ, ಕೊಪ್ಪಳ, ಯಾದಗೀರಿ, ಕಲಬುರಗಿ, ಜಿಲ್ಲೆಯನ್ನೊಳಗೊಂಡಿರುತ್ತದೆ** ಕಾರ್ಯವ್ಯಾಪ್ತಿಯ ಅನುಮತಿಯೊಂದಿಗೆ ಸಹಕಾರಿಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.
3. ಸಹಕಾರಿಯ ಸನ್ 2017-18 ಸಾಲಿನಲ್ಲಿ ಶ್ರೀಮಾನ್ ದಿ॥ ಮಮತ ಬಸವರಾಜ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರ ಆಶಯದಂತೆ ಮಾನವಿಯ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಸಹಕಾರಿಯಲ್ಲಿ ಇ-ಸ್ಟಾಂಪಿಂಗ್ ಸೇವಯನ್ನು ಆರಂಭಿಸಲಾಗಿದೆ. ಹಾಗೂ ಸಹಕಾರಿಯ ಸನ್ 2019-20 ಸಾಲಿನಲ್ಲಿ ಸಹಕಾರಿಗೆ ಎಂದೆ ಸಹಕಾರಿಯ ಸ್ವಂತ ನಿವೇಶನವನ್ನು ಖರೀದಿಸಿರುತ್ತದೆ ಹಾಗೂ ಮುಂಬರುವ ದಿನಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡವನ್ನು ಹೊಂದಲು ಹೆಚ್ಚಿನ ಶ್ರಮ ವಹಿಸಬೇಕೆಂದು ತಮ್ಮೆಲ್ಲರ ಸಹಾಯ ಕೊರುತ್ತೇನೆ ಎಂದರು ಹಾಗೂ ಮುಂದುವರೆದು
4. ಸಹಕಾರಿಯ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯಂತೆ ಸಹಕಾರಿಯು ಸನ್ 2022-23 ನೇ ಸಾಲಿನಲ್ಲಿ 5 ವರ್ಷಗಳವರೆಗೆ ಮಾನವಿ ನಗರದ ಸರಕಾರಿ ಉರ್ದು ಪ್ರೌಢ ಶಾಲೆಯನ್ನು ದತ್ತು ಪಡೆದು ಈ ಶಾಲೆಯನ್ನು ಸಹಕಾರಿಯಿಂದ ರೂ.1,75,000/- (ರೂಪಾಯಿ ಒಂದು ಲಕ್ಷದ ಎಪ್ಪತ್ತೈದು ಸಾವಿರಗಳು ಮಾತ್ರ ) ವನ್ನು ಖರ್ಚು ಮಾಡಿ ಶಾಲೆಯ ಸುಣ್ಣ-ಬಣ್ಣ, ಶಾಲೆಯ ವಿಧ್ಯಾರ್ಥಿಗಳಿಗೆ ಪಾಠ್ಯ ಪುಸ್ತಕ ಇತ್ಯಾದಿಗಳನ್ನು ಪೂರೈಕೆ ಮಾಡಿದ್ದು

ಇದರ ಪರಿಣಾಮವಾಗಿ ಶಾಲೆಯು ದತ್ತು ಪಡೆದಾಗಿನಿಂದ 10 ನೇತರಗತಿಯ ವಿದ್ಯರ್ಥಿಗಳು ಶೇ.100% ಉತ್ತೀರ್ಣರಾಗಿರುತ್ತಾರೆ.

5. **ಕರ್ನಾಟಕ ರಾಜ್ಯ ಸರಕಾರವು ನಡೆಸುವ ಅಖಿಲ ಭಾರತ ಸಹಕಾರ ಸಪ್ತಾಹದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ–2023 ರಲ್ಲಿ ಉತ್ತಮ ಸಹಕಾರಿಯೆಂದು ಪ್ರಶಸ್ತಿ ನೀಡಿ ನಮ್ಮ ಸಹಕಾರಿಗೆ ಸನ್ಮಾನಿಸಿರುವುದು ನಮಗೆ ಹೆಮ್ಮಯ ವಿಷಯವಾಗಿದೆ.**

**ಸಹಕಾರಿಯ ಧ್ಯೇಯ ಮತ್ತು ಉದ್ದೇಶಗಳ ಬಗ್ಗೆ ಮಾತನಾಡುತ್ತಾ**

ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ ಯು ಕರ್ನಾಟಕ ಸೌಹಾರ್ದ ಕಾಯಿದೆ 1997ರ ಅನುಗುಣವಾಗಿ ಸಹಕಾರಿಯ ವ್ಯವಹಾರಗಳನ್ನು ಕೈಗೊಳ್ಳುವುದು. ಆರ್ಥಿಕವಾಗಿ ಹಿಂದುಳಿದವರಿಗೆ, ದುರ್ಬಲ ವರ್ಗದವರಿಗೆ, ವ್ಯಾಪಾರಿಗಳಿಗೆ ಅವರ ಆರ್ಥಿಕ ಮಟ್ಟ ಸುಧಾರಿಸುವಂತಹ ಗೃಹ ಕೈಗಾರಿಕೆ, ವ್ಯಾಪಾರ ಮುಂತಾದವುಗಳಿಗೆ ಸಾಲ ನೀಡುವುದು. ನೌಕರದಾರರಿಗೆ, ಉದ್ದಿಮೆದಾರರಿಗೆ, ಸ್ವಯಂ ಉದ್ಯೋಗಿಗಳಿಗೆ ಅವರವರ ಬೇಡಿಕೆಗೆ ಅನುಗುಣವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಲವನ್ನು ಕೊಡುವುದು. ಸದಸ್ಯರಿಂದ, ಠೇವಣಿ ಸಂಗ್ರಹಿಸುವುದು ಮತ್ತು ಸಂಸ್ಥೆಯ ಆಢಳಿತದಲ್ಲಿ ಪಾರದರ್ಶಕತೆ ಹಾಗೂ ಶುದ್ಧ ಹಸ್ತದಿಂದ ವ್ಯವಹರಿಸುವುದು ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಧ್ಯೇಯ ಮತ್ತು ಉದ್ದೇಶವಾಗಿರುತ್ತದೆ. ಸಹಕಾರಿಯ ಬೈಲಾದ ಅಧ್ಯಯ ಮೂರರಲ್ಲಿ ತಿಳಿಸದ ಎಲ್ಲಾ ಉದ್ದೇಶ ಹಾಗೂ ತಿದ್ದುಪಡಿಯಲ್ಲಿ ಸೇರಿಸಲಾದ ಉದ್ದೇಶವನ್ನು ಹೇಳಿದರು.

**ನಂತರ ಸಹಕಾರಿಯ ಪ್ರಗತಿಯ ಬಗ್ಗೆ ಮಾತನಾಡುತ್ತಾ**

ತಮ್ಮ ಸಹಕಾರಿಯು ಸಾಧಿಸಿದ ಪ್ರಗತಿಯು ತಮ್ಮೆಲ್ಲರ ಸೂಚನೆ ಮತ್ತು ಸಹಕಾರದ ಪ್ರತೀಕವಾಗಿದೆ. ಆರ್ಥಿಕ ಶುದ್ದತೆ ಹಾಗೂ ಆರ್ಥಿಕ ಭದ್ರತೆ ನಮ್ಮ ಸಹಕಾರಿಯಲ್ಲಿ ಇರುವುದರಿಂದ ಆರಂಭಿಕ ವರ್ಷಗಳಿಂದ ಉತ್ತಮ ಫಲಿತಾಂಶ ಬಂದಿದ್ದು. ಪ್ರಸಕ್ತ ಸನ್ 2023–24 ನೇ ಸಾಲಿನಲ್ಲಿ ಸಹಕಾರಿಯು ಠೇವಣಿ ಸಂಗ್ರಹಣೆ, ಸಾಲ ವಿತರಣೆ, ವಾರ್ಷಿಕ ವಹಿವಾಟು, ವಸೂಲಾತಿ ಹಾಗೂ ಲಾಭ ಗಳಿಕೆಯಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ. ಪ್ರಸ್ತುತ ಸಾಲಿನಲ್ಲಿ ರೂ. 70,60,133.14 ನಿವ್ವಳ ಲಾಭವನ್ನು ಗಳಿಸಿ ಸಹಕಾರಿಯು ಪ್ರಗತಿಯತ್ತ ಸಾಗುತ್ತಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಎನಿಸುತ್ತದೆ.

ಪರಸ್ಪರ ಸಹಕಾರ, ಹಿತ ಚಿಂತನೆ ಹಾಗೂ ಹಣಕಾಸಿನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಪ್ರಾರಂಭಿಸಲಾದ ನಮ್ಮ ನಿಮ್ಮ ಸಹಕಾರಿಯು ಕಳೆದ ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಹೊಂದುತ್ತಾ ಬಂದಿರುವ ನಮ್ಮ ಸಹಕಾರಿಯು ತನ್ನ ಕಾರ್ಯ ಕ್ಷೇತ್ರದ ವ್ಯಾಪ್ತಿಯ ಸದಸ್ಯರಿಗೆ ಆರ್ಥಿಕ ಸಹಾಯವನ್ನು ನೀಡುತ್ತಾ ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿ ಪ್ರಗತಿ ಪರ ಬೆಳವಣಿಗೆಯನ್ನು ಹೊಂದುತ್ತಲಿರುವದನ್ನು ವರದಿಯಲ್ಲಿ ಕಾಣಿಸಿದ ಅಂಕಿ ಅಂಶಗಳಿಂದ ಗಮನಿಸಬಹುದಾಗಿದೆ ಹಾಗೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ನಿಸ್ವಾರ್ಥ ಸೇವೆ, ಆಡಳಿತದಲ್ಲಿ ಯಾವುದೇ ಹಸ್ತಕ್ಷೇಪವಿಲ್ಲದೆ, ಪ್ರಾಮಾಣಿಕವಾಗಿ ಸಲಹೆ ಸೂಚನೆ ಸಹಕಾರ ನೀಡಿದ್ದೇವೆಂದರು, ಹೀಗೆ ಎಲ್ಲರಿಗೂ ನಮ್ಮ ಸಹಕಾರಿಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಧನ್ಯವಾದಗಳನ್ನು ತಿಳಿಸಿ, ಈ ಸಹಕಾರ ಸಂಬಂಧ ಮುಂಬರುವ ದಿನಗಳಲ್ಲಿಯೂ ಸಹ ಹಾಗೆಯೇ ಮುಂದುವರಿಯಲಿ ಎಂದು ಹಾರೈಸಿದರು

6. **ಸಹಕಾರಿಯಲ್ಲಿ ಸದಸ್ಯತ್ವದ ಹಾಗೂ ಶೇರು ಬಂಡವಾಳ ವಿವರ:**

ವರದಿ ಸಾಲಿನಲ್ಲಿ ಸಹಕಾರಿಯ ಸದಸ್ಯತ್ವದ ತುಲನಾತ್ಮಕ ವಿವರಗಳು ಕೆಳಗಿನಂತಿವೆ.

| **ದಿನಾಂಕ 31–03–2024ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.** | | | |
|---|---|---|---|
| ಸಾಮಾನ್ಯ ಸದಸ್ಯತ್ವ | | **ಶೇರು ಬಂಡವಾಳ** | |
| 2022–23 | 2023–24 | 2022–23 | 2023–24 |
| **2385** | **2415** | **71,46,100/–** | **73,27,900/–** |

7. **ನಿಧಿಗಳು:**

ದಿನಾಂಕ 31–03–2024 ಕ್ಕೆ ಸಹಕಾರಿಯು ಹೊಂದಿರುವ ವಿವಿಧ ರೀತಿಯ ನಿಧಿಗಳು ಈ ಕೆಳಗಿನಂತಿವೆ.

(ರೂ. ಲಕ್ಷಗಳಲ್ಲಿ)

| ವಿವರ | 31–03–2023 | 31–03–2024 |
|---|---|---|
| ಕಾಯ್ದಿಟ್ಟ ನಿಧಿ | 74.06 | 90.31 |
| ಇತರೆ ಎಲ್ಲಾ ನಿಧಿಗಳು | 155.49 | 188.87 |

**8. ಠೇವಣಾತಿಗಳು:** ದಿನಾಂಕ 31-03-2024 ಕ್ಕೆ ಸಹಕಾರಿಯಲ್ಲಿ ಒಟ್ಟು ವಿವಿಧ ರೀತಿಯ ಠೇವಣಿಗಳ ಮೊತ್ತ ರೂ. 18,07,40,572/- ಹಾಗೂ ದಿನಾಂಕ 31-03-2023 ಕ್ಕೆ ರೂ. 16,15,22,084/- ರಷ್ಟಿರುತ್ತದೆ. ಹಾಗೂ ಸಹಕಾರಿಯ ಕಳೆದ ಸಾಲಿಗೆ ಹೋಲಿಸಿದರೆ ರೂ.1,92,18,488/- ಗಳಷ್ಟು ಠೇವಣಿಗಳು ಹೆಚ್ಚಾಗಿರುತ್ತದೆ.

**9. ದುಡಿಯುವ ಬಂಡವಾಳ :**

ದಿನಾಂಕ 31-03-2023 ಕ್ಕೆ ಸಹಕಾರಿಯ ದುಡಿಯುವ ಬಂಡವಾಳವು ರೂ. 1916.25 ಲಕ್ಷಗಳಷ್ಟಿತ್ತು ಹಾಗೂ ದಿನಾಂಕ 31-03-2024 ಕ್ಕೆ ದುಡಿಯುವ ಬಂಡವಾಳವು ರೂ. 2272.96 ಲಕ್ಷಗಳಾಗಿದೆ.

**10. ಸಾಲ ಮತ್ತು ಮುಂಗಡಗಳು :**

ಸಹಕಾರಿಯ ಮೂಲ ಉದ್ದೇಶವಾದ ಪರಸ್ಪರ ಸಹಕಾರ-ಪರಸ್ಪರ ಅಭಿವೃದ್ಧಿಗೆ ಅನುಗುಣವಾಗಿ ಸಹಕಾರಿಯು ಈ ಸಾಲಿನಲ್ಲಿಯೂ ಸದಸ್ಯರಿಗೆ ವಿವಿಧ ಉದ್ದೇಶಗಳಿಗೆ ಸಾಲವನ್ನು ನೀಡಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಸಾಲ ಮತ್ತು ಮುಂಗಡಗಳು ರೂ. 1781.05 ಲಕ್ಷ ಇರುತ್ತವೆ ಪ್ರಸಕ್ತ ಸಾಲಿನಲ್ಲಿ ಸಹಕಾರಿಯ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರ ಪರಿಶ್ರಮದಿಂದಾಗಿ ಸಹಕಾರಿಯು ವಸೂಲಾತಿಯಲ್ಲಿ ಶೇ.97.45% ರಷ್ಟು ಪ್ರಗತಿ ಸಾಧಿಸಿದೆ.

**11. ಹೂಡಿಕೆಗಳು :**

ದಿನಾಂಕ 31-03-2024 ಕ್ಕೆ ಸಹಕಾರಿಯು ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕನಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ. 108.67 ಲಕ್ಷಗಳು ಮತ್ತು ಆರ್ ಡಿ ಸಿ ಸಿ ಬ್ಯಾಂಕ್ ಮಾನವಿ ಶಾಖೆ & ರಾಯಚೂರು ಶಾಖೆ ಯಲ್ಲಿ ಮುದ್ದತ್ ಠೇವಣಿ ರೂಪದಲ್ಲಿ ರೂ.263.14 ಲಕ್ಷಗಳು ಹಾಗೂ ವಿಕಾಸ ಬ್ಯಾಂಕನಲ್ಲಿ(ಸಿಂಧನೂರ್ ಶಾಖೆ) ಮುದ್ದತ್ ಠೇವಣಿ ರೂಪದಲ್ಲಿ ರೂ. 132.38 ಲಕ್ಷಗಳು ಮತ್ತು ಇ-ಸ್ಟಾಂಪಿಂಗ ನ ಭದ್ರತ ಠೇವಣಿಯಲ್ಲಿ ರೂ.50,000/- ಹಾಗೂ ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ರೂ.25,000/- ಶೇರು ಹಾಗೂ ಜಿಲ್ಲಾ ಸೌಹಾರ್ದ ಒಕ್ಕೂಟದಲ್ಲಿ ರೂ.10,000/- ಶೇರು ರಂತೆ, ಒಟ್ಟಾರೆ ರೂ.505.04 ಲಕ್ಷಗಳಷ್ಟು ತೊಡಗಿಸಲಾಗಿದೆ.

**12. ಲೆಕ್ಕ ತಪಾಸಣೆ:**

ಸಹಕಾರಿಯ ಲೆಕ್ಕ ಪತ್ರಗಳು ದಿನಾಂಕ 31-03-2024 ರವರೆಗೆ ತಪಾಸಣೆ ಗೋಂಡಿದ್ದು ಸಹಕಾರಿಯು "ಎ" ವರ್ಗದಲ್ಲಿ ವರ್ಗೀಸಲ್ಪಟ್ಟಿದೆ. ಸನ್ 2023-224 ನೇ ಸಾಲಿನಲ್ಲಿ ಲೆಕ್ಕ ತಪಾಸಣೆ ವರದಿಯಲ್ಲಿ ಯಾವೂದೇ ನ್ಯೂನ್ಯತೆ ಕಂಡುಬಾರದ ಕಾರಣ ಆಢಳಿತ ಮಂಡಳಿಯು ಅನುಪಾಲನಾ ವರದಿ ನೀಡಿರುವುದಿಲ್ಲ. ಸನ್ 2023-24 ನೇ ಸಾಲಿನ ಶಾಸನ ಬದ್ದ ಲೆಕ್ಕ ತಪಾಸಣೆಯನ್ನು ಲೆಕ್ಕ ಪರಿಶೋಧಕರು **ಮೆ॥ ಶ್ರೀನಿವಾಸ್ ನೆಲೆಜೆರಿ & ಕಂ. ಹೊಸಪೇಟೆ, ಸಿ ಎ ಶ್ರೀನಿವಾಸ್ ನೆಲೆಜೆರಿ, ಹೊಸಪೇಟೆ** ಇವರು ಲೆಕ್ಕ ಪರಿಶೋಧನೆಯನ್ನು ಮಾಡಿ ಯೋಗ್ಯ ಮಾರ್ಗದರ್ಶನವನ್ನು ನೀಡಿರುತ್ತಾರೆ.

**15. ಸಭೆಗಳು:**

ವರದಿ ಸಾಲಿನಲ್ಲಿ 8 ಆಡಳಿತ ಮಂಡಳಿಯ ಸಭೆಗಳು ನಡೆದಿವೆ. ಈ ಎಲ್ಲಾ ಸಭೆಗಳಲ್ಲಿನ ನಿರ್ಣಯಗಳನ್ನು ಸಭೆ ಪರಿಶೀಲಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಹಾಗೂ ಈ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**16. ಲಾಭ ಗಳಿಕೆ ಹಾಗೂ ವಿತರಣೆ:**

ಸನ್ 2023-2024ನೇ ಸಾಲಿನಲ್ಲಿ ರೂ. 7060133/- ಲಾಭ ಗಳಿಸಿದೆ. ಇದು ಸಹಕಾರಿಯ ಸದಸ್ಯರು ತೋರಿಸಿದ ವಿಶ್ವಾಸ, ಸಹಕಾರ ಹಾಗೂ ಸಿಬ್ಬಂದಿ/ನಿರ್ದೇಶಕ ಮಂಡಳಿಯವರ ಅವಿರತ ಶ್ರಮದ ಫಲ ಎಂದು ತಿಳಿಸಲು ನನಗೆ ಅತೀವ ಸಂತೋಷವಾಗುತ್ತದೆ ಹಾಗೂ ಈ ವರದಿ ಸಾಲಿನಲ್ಲಿ ಸಹಕಾರಿಯ ಉಪನಿಯಮ 80 ರ ಪ್ರಕಾರ ಸನ್ 2023-24 ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ನಿವ್ವಳ ಲಾಭವನ್ನು ವಿಭಜನೆ ಮಾಡಬೇಕಾಗಿದ್ದು, ಇದನ್ನು ವಿಷಯ 7 ಹಾಗೂ ಟಿಪ್ಪಣಿ 7 ರಂತೆ ಸಭೆಯಲ್ಲಿ ನಿರ್ಣಯದಂತೆ ವಿಭಜನೆ ಮಾಡಲಾಯಿತು.

**ವಿಷಯ4:** ಸನ್ 2023-24 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ4:** **ಮೆ॥ ಶ್ರೀನಿವಾಸ್ ನೆಲೆಜೆರಿ & ಕಂ. ಹೊಸಪೇಟೆ, ಸಿ ಎ ಶ್ರೀನಿವಾಸ್ ನೆಲೆಜೆರಿ, ಹೊಸಪೇಟೆ,** ಇವರು ನೀಡಿರುವ 2023-24 ನೇ ಸಾಲಿನ ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಮಹಾಸಭೆಯಲ್ಲಿ **ಮೆ॥ ಶ್ರೀನಿವಾಸ್ ನೆಲೆಜೆರಿ & ಕಂ. ಹೊಸಪೇಟೆ, ಸಿ ಎ ಶ್ರೀನಿವಾಸ್ ನೆಲೆಜೆರಿ, ಹೊಸಪೇಟೆ** ಲೆಕ್ಕಪರಿಶೋಧಕರು ಇವರ ಅಪ್ಪಣೆಯ ಮೇರೆಗೆ ಸಭೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಾಕೀರ

ಮೋಹಿಯುದ್ದಿನ್ ಇವರು ಓದಿ ಹೇಳಿದರು ಹಾಗೂ ವರದಿ ಸಾಲಿನಲ್ಲಿ ಲೆಕ್ಕಪರಿಶೋಧನಾ ವರದಿಯ ಪ್ರಕಾರ ಸಹಕಾರಿಯನ್ನು 'ಎ' ವರ್ಗಕ್ಕೆ ಸೇರಿರುತ್ತದೆ ಹಾಗೂ ಈ 2023–24 ನೇ ಸಾಲಿನ ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ 5:** ಸನ್ 2023–24 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯ ಪರಿಗಣನೆ.

**ನಿರ್ಣಯ5:** ಸನ್ 2023–24 ನೇ ಸಾಲಿನ ಸಹಕಾರಿಯ ಲೆಕ್ಕಪರಿಶೋಧನಾ ವರದಿಯ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಸಭೆಗೆ **ಮೆ॥ ಶ್ರೀನಿವಾಸ್ ನೆಲೆಚೆರಿ** & **ಕಂ. ಹೊಸಪೇಟೆ, ಸಿ ಎ ಶ್ರೀನಿವಾಸ್ ನೆಲೆಚೆರಿ, ಹೊಸಪೇಟೆ,** ಇವರು ನೀಡಿರುವ 2023–24 ನೇ ಸಾಲಿನ ಲೆಕ್ಕಪರಿಶೋಧನ ವರದಿ ಹಾಗೂ ಲೆಕ್ಕ ಪರಿಶೋದಿತ ತಃಖ್ತೆಗಳನ್ನು ಮಹಾಸಭೆಯಲ್ಲಿ **ಸಿ ಎ ಶ್ರೀನಿವಾಸ್ ನೆಲೆಚೆರಿ, ಹೊಸಪೇಟೆ,** ಲೆಕ್ಕಪರಿಶೋಧಕರು ಇವರ ಅಪ್ಪಣೆಯ ಮೇರೆಗೆ ಸಭೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಾಕೀರ್ ಮೋಹಿಯುದ್ದಿನ್ ಇವರು ಓದಿ ಹೇಳಿದರು ಹಾಗೂ ವರದಿ ಸಾಲಿನಲ್ಲಿ ಲೆಕ್ಕಪರಿಶೋಧನಾ ವರದಿಯ ಪ್ರಕಾರ ಸಹಕಾರಿಯನ್ನು 'ಎ' ವರ್ಗಕ್ಕೆ ಸೇರಿರುತ್ತದೆ ಎಂದು ಓದಿದರು ಹಾಗೂ ಇದನ್ನು ಸಭೆ ಪರಿಶೀಲಿಸಲಾಯಿತು ಹಾಗೂ ಸಹಕಾರಿಯು ಯಾವುದೇ ನ್ಯೂನ್ಯತೆಗಳು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸದ ಕಾರಣ ಆಡಳಿತ ಮಂಡಳಿಯು ಯಾವುದೇ ಅನುಪಾಲನಾ ವರದಿಯನ್ನು ನೀಡಿರುವುದಿಲ್ಲ ಎಂದು ಮಹಾಸಭೆಯ ಪರಿಶೀಲಿಸಿ ಹಾಜರಿದ್ದ ಸರ್ವ ಸದಸ್ಯರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ6:** ಸನ್ 2023–2024 ನೇ ಸಾಲಿನ ಆಯವ್ಯಯ, ಲಾಭ ಹಾನಿ ಪತ್ರಿಕೆ ಹಾಗೂ ಅಢಾವೆ ಪತ್ರಿಕೆ ಓದಿ ಒಪ್ಪಿಗೆ ಕೊಡುವ ಬಗ್ಗೆ.

**ನಿರ್ಣಯ6:** ಸನ್ 2023–2024 ನೇ ಸಾಲಿನ ಆಯವ್ಯಯ, ಲಾಭ ಹಾನಿ ಪತ್ರಿಕೆ ಹಾಗೂ ಅಢಾವೆ ಪತ್ರಿಕೆಯನ್ನು ಸಹಕಾರಿಯ ಸಿಬ್ಬಂದಿಗಳು ಮಂಡಿಸಿದ್ದರು ಹಾಗೂ ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಚಪ್ಪಾಳೆಯೊಂದಿಗೆ ಒಪ್ಪಿಗೆ ನೀಡಲಾಯಿತು. ಲಾಭ ಹಾನಿ ಹಾಗೂ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ಲಾಭ ಹಾನಿ ಪತ್ರಿಕೆ 31/03/2024 ಕ್ಕೆ ಇದ್ದಂತೆ**

**ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ**

**ದಿನಾಂಕ 01–04–2023 ರಿಂದ 31–03–2024 ರವರೆಗಿನ ಲಾಭ ಮತ್ತು ನಷ್ಟದ ತಃಖ್ತೆ**

| | | | |
|---|---|---|---|
| ಬ್ಯಾಂಕ ಸಾಲಗಳ ಮೇಲೆ ಬಡ್ಡಿ ಕೊಟ್ಟದ್ದು | 18,62,466 | ಗುಂತಾವಣಿಗಳ ಮೇಲೆ ಬಂದ ಆದಾಯ | 34,43,111 |
| ಠೇವುಗಳ ಮೇಲೆ ಬಡ್ಡಿ ಕೊಟ್ಟದ್ದು | 1,65,80,509 | ಸಾಲಗಳ ಮೇಲೆ ಬಂದ ಬಡ್ಡಿ | 2,83,37,582 |
| ಸಿಬ್ಬಂದಿ ವೆಚ್ಚಗಳು | 27,85,358 | ಇತರೆ ಆದಾಯ | 6,47,913 |
| ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು | 16,82,719 | | |
| ಅವಕಾಶಗಳು | 20,58,772 | | |
| ಸವಕಳಿ | 3,98,649 | | |
| ನಿವ್ವಳ ಲಾಭಾ 2023–24 | 70,60,134 | | |
| ಒಟ್ಟು | **3,24,28,606** | ಒಟ್ಟು | **3,24,28,606** |

**ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಾನವಿ**

**ದಿನಾಂಕ 31–03–2024 ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತ:ಖೆ**

| | | | |
|---|---|---|---|
| ಸದ್ಯಸರ ಷೇರು ಬಂಡವಾಳ | 73,27,900 | ನಗದು ಶಿಲ್ಕು | 9,53,378 |
| ಸಂಘದ ನಿಧಿಗಳು | 2,79,18,711 | ಬ್ಯಾಂಕು ಖಾತೆಗಳು | 7,46,150 |
| ಬ್ಯಾಂಕ್ ಸಾಲಗಳು | 1,13,09,248 | ಹೂಡಿಕೆಗಳು | 5,05,04,045 |
| ಸದ್ಯಸರ ಠೇವಣಿಗಳು | 18,07,40,572 | ಸದ್ಯಸರ ಸಾಲಗಳು | 17,87,05,683 |
| ಅವಕಾಶಗಳು | 45,37,900 | ಆಸ್ತಿಗಳು | 64,98,283 |
| ನಿವ್ವಳ ಲಾಭ 2023–24 | 70,60,133 | ಇತರೆ ಮುಂಗಡ | 14,86,925 |
| ಒಟ್ಟು | **23,88,94,464** | ಒಟ್ಟು | **23,88,94,464** |

**ವಿಷಯ7:** ಸನ್ 2023–24 ನೇ ಸಾಲಿನ ಸಹಕಾರಿಯ ನಿವ್ವಳ ಲಾಭ ಹಂಚಿಕೆಗೆ ಮಂಜೂರು ನೀಡುವ ಬಗ್ಗೆ.

**ನಿರ್ಣಯ7:** ಹೊಸ ಸೌಹಾರ್ದ ಕಾಯ್ದೆ ಪ್ರಕಾರ ಸನ್ 2023–24ನೇ ಸಾಲಿನಲ್ಲಿ ಸಹಕಾರಿಯು ಗಳಿಸಿದ ನಿವ್ವಳ ಲಾಭವನ್ನು ವಿಲೇವಾರಿ ಮಾಡಬೇಕಾಗಿದ್ದು ದಿನಾಂಕ 13–08–2024 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ಮಹಾ ಸಭೆಗೆ ಶಿಫಾರಸ್ಸು ಮಾಡಿದ್ದನ್ನು ಈ ಕೆಳಗಿನಂತೆ ಮಹಾ ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ಒಟ್ಟು ನಿವ್ವಳ ಲಾಭ ಸನ್ 2023–2024 ಕ್ಕೆ ರೂ. 70,60,133.14ಮೊತ್ತದ ಲಾಭದ ಹಂಚಿಕೆಯ ವಿವರ**

| ಕ್ರ,ಸಂ, | ವಿವರ | ಪ್ರತಿಶತ | ರೂಪಾಯಿ |
|---|---|---|---|
| 1, | ಕಾಯ್ದಿಟ್ಟ ನಿಧಿ | 25% | 17,65,033.29 |
| 2, | ಸಹಕಾರ ಶಿಕ್ಷಣ ನಿಧಿ | 2% | 1,41,202.67 |
| 3, | ಅನಿರೀಕ್ಷಿತ ನಷ್ಟಗಳು, ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣೆಗೆ ಮೀಸಲು ನಿಧಿ | 20% | 14,12,026.62 |
| 4, | ಸಮಾನ್ಯ ಕ್ಷೇಮ ನಿಧಿ | 5% | 3,53,006.65 |
| 5 | ಸಿಬ್ಬಂಧಿ ಕ್ಷೇಮ ನಿದಿ | 4% | 2,82,405.32 |
| 6 | ಕಟ್ಟಡ ನಿಧಿ | 20% | 14,12,026.62 |
| 7 | ಶಿವಪ್ರಿಯ ಸದಸ್ಯರ ಕ್ಷೇಮ ನಿಧಿ | 3% | 2,11,803.99 |
| 8 | ಸಹಕಾರ ಅಕಾಡೆಮಿ(ನೋಂ), ಮೈಸೂರು ಇದಕ್ಕೆ ಶೇ. 0.50; | 0.50% | 35,300.66 |
| 9 | ನಿರ್ದೇಶಕರ ಕ್ಷೇಮ ನಿಧಿ | **1%** | 70,601.33 |
| 10 | ಸದಸ್ಯರಿಗೆ ಲಾಭಾಂಶ 16% | **16%** | 11,76,000.00 |
| 11 | ಸಹಕಾರಿಯ ವ್ಯವಹಾರ ಅಭಿವೃದ್ಧಿ ನಿಧಿ | ಉಳಿದ ಭಾಗ | 2,00,725.99 |
| | **ಒಟ್ಟು ನಿವ್ವಳ ಲಾಭ ಸನ್ 2023–2024 ಕ್ಕೆ** | | **70,60,133..14** |

ಸಿಬ್ಬಂದಿ ಬೋನಸ್‌ನ್ನು ರೂ.4,66,835/–(ಮಾರ್ಚ–2024 ಕ್ಕೆ ಪ್ರಾವಿಶನ್ ಮಾಡಲಾಗಿತ್ತು) ಇದನ್ನು ಪಾವತಿಸಲು ಸಹಕಾರಿಯ ಮಾನ್ಯ ಅಧ್ಯಕ್ಷರು ಮಂಡಿಸಿದರು ಸರ್ವ ಸದಸ್ಯರಿಂದ ಚಪ್ಪಾಳೆಯ ಮುಖಾಂತರ ಅನುಮೋದನೆಯನ್ನು ನೀಡಿದರು.

**ವಿಷಯ 8:** ಸಹಕಾರಿಯ ಸನ್ 2024–25 ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಧಾರಣೆ ಬಗ್ಗೆ.

**ನಿರ್ಣಯ8:** ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾಯ್ದೆ 2004 ರ ಕಲಂ 33 ರನ್ವಯ ಸಹಕಾರಿಯು ತನ್ನ ವಾರ್ಷಿಕ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನ ನಿರ್ದೇಶಕರು ತಿಳಿಸಿದ ಲೆಕ್ಕಪರಿಶೋಧಕರ ಪಟ್ಟಿಯಿಂದ ನೇಮಕಗೊಂಡ, ಲೆಕ್ಕಪರಿಶೋಧಕರಿಂದ (ಸಿ,ಎ) ಮಾಡಿಸಬೇಕಾಗಿರುವುದನ್ನು ಸಭೆಯು ಪರಿಶೀಲಿಸಿ, ಸಹಕಾರಿಯ ಲೆಕ್ಕಪರಿಶೋಧನೆ ಇಲಾಖೆಯ ಅನುಮೋದಿತ ಲೆಕ್ಕ ಪರಿಶೋಧಕರ ಪಟ್ಟಿಯಲ್ಲಿರುವವರನ್ನು ನೇಮಿಸಿಕೋಳ್ಳುವ ಅಧಿಕಾರವನ್ನು ಹಾಗೂ ಲೆಕ್ಕ ಪರಿಶೋಧಕರಿಗೆ ನೀಡಬಹುದಾದ ಸಂಭಾವನೆ ನಿರ್ಧಾರಣೆ ಮಾಡುವ ವಿಷಯವನ್ನು ಸಹಕಾರಿಯ ಮಾನ್ಯ ಆಧ್ಯಕ್ಷರು ಮಂಡಿಸಿದರು ಇದರ ಬಗ್ಗೆ ಸಭೆಯು ಚರ್ಚಿಸಲಾಗಿ ಸಿ ಎ ಶ್ರೀನಿವಾಸ್ ನೆಲಜೇರಿ, ಮಾಲಕರು, ಮೆ॥ ಶ್ರೀನಿವಾಸ್ ನೆಲಜೇರಿ & ಕೋ., , ಸನ್ನದು ಲೆಕ್ಕಪರಿಶೋಧಕರು, ಹೊಸಪೇಟೆ–583 201 (www.sahakaradarpana.kar.nic.in Auditor id : C-02/09/2023-15:06:53) ಇವರನ್ನು ನೇಮಿಸಲು ಹಾಗೂ ಇವರಿಗೆ ರೂ. 75,000/– ಜಿ.ಎಸ್.ಟಿ ಒಳಗೊಡಂತೆ ನೀಡಲು ಸಹಕಾರಿಯ ನಿರ್ದೇಶಕರಾದ ಶ್ರೀ ಜಾಕೀರ ಮೋಹಿಯುದ್ದಿನ್ ಓದಿ ಹೇಳಿದರು ಹಾಗೂ ಈ ನಡುವಳಿಗಳನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ9:** 2024–25 ಸಾಲಿನ ಅಂದಾಜು ಮುಂಗಡ ಪತ್ರಿಕೆ ಓದಿ ಒಪ್ಪಿಗೆ ಕೊಡುವ ಬಗ್ಗೆ.

**ನಿರ್ಣಯ9:** 2024–25 ಸಾಲಿನ ಅಂದಾಜು ಮುಂಗಡ ಪತ್ರಿಕೆಯನ್ನು ಸಹಕಾರಿಯ ಮುಖ್ಯ ಕಾರ್ಯ ನಿರ್ವಾಣಾಧಿಕಾರಿ ಈ ಕೆಳಗಿನಂತೆ ಮಂಡಿಸಿದ್ದರು,

## ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಾನವಿ

### 2024–25 ಸಾಲಿನ ಮುಂಗಡ ಆಯ–ವ್ಯಯ ಪ್ರತಿಕೆ

| ವೆಚ್ಚ | 2024–25 ನೇ ಸಾಲಿನ ಅಂದಾಜು ವೆಚ್ಚ | ಆದಾಯ | 2024–25 ನೇ ಸಾಲಿನ ಅಂದಾಜು ಆಯ |
|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 1,83,50,000 | ಬಡ್ಡಿ ಆದಾಯ | 2,95,00,000 |
| ಬ್ಯಾಂಕಿನಿಂದ ತೆಗೆದುಕೋಂಡ ಸಾಲಗಳ ಮೇಲಿನ ಬಡ್ಡಿ | 15,00,000 | ಗುಂತಾವಳಿಗಳ ಮೇಲೆ ಬಡ್ಡಿ ಆದಾಯ | 4000000 |
| ಸಹಕಾರಿಇನ್ಶೂರೆನ್ಸ್ | 25,000 | ಇತರ ಆದಾಯ | 700000 |
| ಪಿಗ್ಮಿ ಏಜೆಂಟರ ಕಮಿಷನ್ | 4,00,000 | | |
| ಬ್ಯಾಂಕ್ ಚಾರ್ಜಸ್ | 10,000 | | |
| ಇತರೆ ಖರ್ಚುಗಳು | 4,00,000 | | |
| ಸಿಬ್ಬಂದಿ ವೇತನ | 30,00,000 | | |
| ಮುದ್ರಣ ಮತ್ತು ಸ್ಟೇಷನರಿ | 1,50,000 | | |
| ಲೆಕ್ಕ ಪರಿಶೋಧನಾ ಶುಲ್ಕ | 75,000 | | |
| ದಿನಪತ್ರಿಕೆ ವೆಚ್ಚ | 6,500 | | |
| ವಿದ್ಯುತ್ ವೆಚ್ಚ | 1,30,000 | | |
| ಜಾಹಿರಾತು ವೆಚ್ಚ | 50,000 | | |
| ವಾರ್ಷಿಕ ಮಹಾ ಸಭೆಯ ವೆಚ್ಚ | 2,00,000 | | |
| ದೂರವಾಣಿ | 30,000 | | |
| ಅಂಚೆ ವೆಚ್ಚ | 25,000 | | |
| ಕಂಪ್ಯೂಟರ್ ವೆಚ್ಚ | 50,000 | | |
| ನಿರ್ದೇಶಕ ಮಂಡಳಿಯ ಸಭೆ ವೆಚ್ಚ | 50,000 | | |
| ಪ್ರವಾಸ ವೆಚ್ಚ/ಭತ್ಯೆ | 50,000 | | |
| ಸಹಕಾರಿಯ ವೃತ್ತಿ ತೆರಿಗೆ | 2,500 | | |
| ಸಹಕಾರಿಯ ಕಟ್ಟಡ ಬಾಡಿಗೆ ವೆಚ್ಚ | 3,30,000 | | |
| ಕಛೇರಿ ನಿರ್ವಹಣಾ ವೆಚ್ಚ | 1,00,000 | | |
| ಸಂಯುಕ್ತ ಸಹಕಾರಿಯ ವೆಚ್ಚ | 30,000 | | |
| ಪಿಗ್ಮಿಮಶೀನ್ ನಿರ್ವಹಣೆ ಖರ್ಚು | 25,000 | | |
| ಪೂಜಾ ಖರ್ಚು | 50,000 | | |
| ಸವುಕಳಿ | 4,00,000 | | |
| ಎ ಸಿ ನಿರ್ವಹಣಾ ವೆಚ್ಚ್ | 30,000 | | |
| ತೆರಿಗೆ ಸಲಹೆಗಾರರ ವೆಚ್ಚ | 50,000 | | |
| ಬ್ಯಾಂಕ ಸಾಫ್ಟವೇರ್ ವಾರ್ಷಿಕ ವೆಚ್ಚ | 24,000 | | |
| ಸಿಬ್ಬಂದಿ ಬೊನಸ್ | 5,00,000 | | |
| ಸಾಲ ವಸೂಲಾತಿ ಹಾಗೂ ವಾಹನ ನಿರ್ವಹಣೆ ವೆಚ್ಚ | 50,000 | | |
| ಸಿಬ್ಬಂದಿ ಭವಿಷ್ಯ ನಿಧಿ/ ಗ್ರಾಚುಟಿ ನಿಧಿ | 5,00,000 | | |
| ಜಿ ಎಸ್ ಟಿ ವೆಚ್ಚ | 50,000 | | |
| ಇನ್ವರ್ಟರ್ ಮೆಂಟೆನೆನ್ಸ್ | 20000 | | |
| ಸಹಕಾರಿ ಕಟ್ಟಡ ನಿರ್ವಹಣಾ ವೆಚ್ಚ | 50,000 | | |
| ವಿದ್ಯೈತ್ ಸಾಮಗ್ರಿ ವೆಚ್ಚ | 20,000 | | |
| ಎಸ್ ಎಮ್ ಎಸ್ ವೆಚ್ಚ | 10,000 | | |
| ಪಿಎಫ್ ಖರ್ಚು | 37,000 | | |
| ಇಇಎಲ್ | 1,20,000 | | |
| ಅಂದಾಜು ಲಾಭ | 73,00,000 | ಲಾಭ ನಷ್ಟ (ನಷ್ಟ) | |
| **ಒಟ್ಟು** | **3,42,00,000** | **ಒಟ್ಟು** | **3,42,00,000** |

ಸಹಕಾರಿಯ ಮುಖ್ಯ ಕಾರ್ಯನಿರ್ವಹಕರು ಈ ಮೇಲಿನಂತೆ ಮಂಡಿಸಿದರು ಹಾಗೂ ಈ ಮುಂಗಡ ಪತ್ರಿಗೆಯನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು

**ವಿಷಯ 10: ಹಿಂದಿನ ವರ್ಷದ ಬಜೆಟ್‌ಗಿಂತ ಹೆಚ್ಚುವರಿ ವೆಚ್ಚಕ್ಕೆ ಸಭೆ ಅನುಮೋದನೆ ನೀಡುವ ಬಗ್ಗೆ.**

**ನಿರ್ಣಯ 10:** ಸನ್ 2023–24 ನೇ ಸಾಲಿನ ಹೆಚ್ಚುವರಿಯಾದ ವೆಚ್ಚಗಳನ್ನು ಈ ಕೆಳಗೆ ನೀಡಲಾಗಿದೆ ಪರಿಶೀಲಿಸಿ ಮಹಾಸಭೆಯು ಅನುಮೋದಿಸಬಹುದಾಗಿದೆ.

| ಜಿ ಎಲ್ ಹೆಸರು | 2022–23 ನೇ ಸಾಲಿನ ಅಂದಾಜು ವೆಚ್ಚ | 2022–23 ನೇ ಸಾಲಿನ ನಿವ್ವಳ ವೆಚ್ಚ | ಹೆಚ್ಚುವರಿ ಆದ ವೆಚ್ಚ | ವಿವರಣೆ |
|---|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 1,65,00,000 | 1,65,80,509 | 80,509 | ಹೆಚ್ಚುವರಿ ಠೇವಣಾತಿ ಬಂದಿದ್ದರಿಂದ |
| ಬ್ಯಾಂಕಿನಿಂದ ತೆಗೆದುಕೊಂಡ ಸಾಲಗಳ ಮೇಲಿನ ಬಡ್ಡಿ | 9,00,000 | 18,62,466 | 9,62,466 | ಹೆಚುವರಿ ಸಾಲ ಪಡೆದು ಸಹಕಾರಿಯ ಸದಸ್ಯರಿಗೆ ಸಾಲ ಒದಗಿಸಿದ್ದರಿಂದ |
| ಸಿಬ್ಬಂದಿ ವೇತನ | 27,00,000 | 27,65,657 | 65,657 | ಸಹಕಾರಿಯ ಸಿಬ್ಬಂದಿಗೆ ಹಿಂದಿನ ವಾರ್ಷಿಕ ಮಹಾಸಭೆಯ ನಿರ್ಣಯದಂತೆ ವೇತನ ಪರಿಷ್ಕರಿಸಿದ್ದರಿಂದ |
| ಮುದ್ರಣ ಮತ್ತು ಸ್ಟೇಷನರಿ | 75,000 | 76,615 | 1,615 | ಹೆಚ್ಚುವರಿ ಮುದ್ರಣ ಆಗಿರುತ್ತದೆ |
| ದೂರವಾಣಿ | 25,000 | 33,386 | 8,386 | ಪೋಸ್ಟಪೇಡ್ ಗೆ ಬದಲಾಯಿಸಲಾಗಿದೆ |
| ಸವುಕಳಿ | 3,00,000 | 3,98,649 | 98,649 | ಹೆಚ್ಚುವರಿ ಮಾಡಲಾಗಿದೆ |
| ಸಿಬ್ಬಂದಿ ಬೊನಸ್ | 4,00,000 | 4,60,000 | 60,000 | ಸಹಕಾರಿಯ ಸಿಬ್ಬಂದಿಗೆ ಹಿಂದಿನ ವಾರ್ಷಿಕ ಮಹಾಸಭೆಯ ನಿರ್ಣಯದಂತೆ ವೇತನ ಪರಿಷ್ಕರಿಸಿದ್ದರಿಂದ ಹೆಚ್ಚುವರಿ ಪ್ರವಧನ ಮಾಡಲಾಗಿದೆ |
| ಸಿಬ್ಬಂದಿ ಭವಿಷ್ಯ ನಿಧಿ/ ಗ್ರಾಚುಟಿ ನಿಧಿ | 3,50,000 | 5,18,000 | 1,68,000 | ಹೆಚ್ಚುವರಿ ಪ್ರವಧನ ಮಾಡಲಾಗಿದೆ |
| ಮುಳುಗುವ ಸಾಲಗಳು | | 80,772 | 80,772 | ಮುಳುಗುವ ಸಾಲಗಳಿಗೆ ಪ್ರವಧನ ಮಾಡಿದ ಕುರಿತು |
| ವಿದ್ಯೈತ್ ಸಾಮಗ್ರಿ ವೆಚ್ಚ | | 17,000 | 17,000 | ವಿದ್ಯೈತ್ ಸಾಮಗ್ರಿ ಸುಟ್ಟು ಹೊದಕಾರಣ ಹೊಸದನ್ನು ಅಳವಡಿಸಲಾಗಿದೆ. |
| ಎಸ್ ಎಮ್ ಎಸ್ ವೆಚ್ಚ | | 35,400 | 35,400 | ಹೊಸದಾಗಿ ಖರೀದಿ ಮಾಡಲಾಗಿದೆ. |
| ಪಿಎಫ್ ಖರ್ಚು | | 19,701 | 19,701 | ಹೆಚ್ಚುವರಿ ಪ್ರವಧನ ಮಾಡಲಾಗಿದೆ |
| ಇಇಎಲ್ | | 1,08,087 | 1,08,087 | ಸಿಬ್ಬಂದಿಗೆ ಪಾವತಿ ಮಾಡಲಾಇದೆ |
| ಸಹಕರಿ ದಶಮಾನೋತ್ಸವ ನಿಧಿ | | 3,00,000 | 3,00,000 | ಸಹಕರಿ ದಶಮಾನೋತ್ಸವ ಹೆಚ್ಚುವರಿ ಪ್ರವಧನ ಮಾಡಲಾಗಿದೆ |
| ಎನ್ ಪಿ ಎ | | 7,00,000 | 7,00,000 | ಎನ್ ಪಿ ಎ ಪ್ರವಧನ ಮಾಡಿದ ಕುರಿತು |

ಈ ಮುಂಗಡ ಪತ್ರಿಗೆಯನ್ನು ಹಾಜರಿದ್ದ ಸರ್ವ ಸದಸ್ಯರು ಆಲಿಸಿದರು ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ11:** **ಉಪವಿಧಿ ತಿದ್ದುಪಡಿ ಮಾಡುವುದರ ಕುರಿತು.**

**ನಿರ್ಣಯ11:** ಯಾವುದೇ ತಿದ್ದುಪಡಿ ಇರುವುದಿಲ್ಲ.

**ವಿಷಯ 12: ಸಹಕಾರಿಯ ಸ್ವಂತ ನಿವೇಶನ ಅಥವಾ ಕಟ್ಟಡವನ್ನು ಖರೀದಿಸಿದ ವಿವರ ವನ್ನು ಪರಿಗಣನೆಗೆ ತೆಗೆದುಕ್ಕೊಳ್ಳುವುದು.**

**ನಿರ್ಣಯ12:** 5ನೇ ವಾರ್ಷಿಕ ಮಹಾಸಭೆಯ ನಿರ್ಣಯ 12 ರಂತೆ ಸಹಕಾರಿಗೆ ಒಂದು ಉತ್ತಮ ನಿವೇಶನ ದೊರೆತದ್ದರಿಂದ ಈ 2019–20 ನೇ ಸಾಲಿನಲ್ಲಿ ಆಢಳಿತ ಮಂಡಳಿಯ ಉತ್ತಮ ನಿರ್ಣಯದಿಂದಗಿ ಸಹಕರಿಗೆ ಯೋಗ್ಯ ಬೆಲೆಗೆ ಒಂದು ನಿವೇಶನವನ್ನು ಖರೀದಿಸಲಾಯಿತು ಇದರ ಬಗ್ಗೆ ಸಭೆಯಲ್ಲಿ ಸವಿಸ್ತಾರವಾಗಿ ವಿವರಣೆಯೊಂದಿಗೆ ಸಭೆಯಲ್ಲಿ ಚರ್ಚೆ ಮಾಡಲಯಿತು ಹಾಗೂ ಸಹಕಾರಿಯ ಕಟ್ಟಡ ನಿಧಿಗೆ ಶೇ.20% ನ್ನು ಲಾಭಂಶದಲ್ಲಿ ವರ್ಗಿಕರಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು. ಮುಂದುವರೆದು ಸಹಕಾರಿಯ ಸದಸ್ಯರ ಅನುಕೂಲಕ್ಕಾಗಿ ಹಾಗೂ ಸಹಕಾರಿಯ ಭವಿಷ್ಯದ ಹಿತದೃಷ್ಟಿಯಿಂದ ಮುಂಬರುವ ದಿಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡವನ್ನು ಕಟ್ಟಲು ಅದಕ್ಕಾಗುವ ವೆಚ್ಚಪಟ್ಟಿಯನ್ನು ತಯಾರಿಸಲು ಸಹಕಾರಿಯ ಆಡಳಿತ ಮಂಡಳಿಗೆ ಅಧಿಕಾರವನ್ನು ನೀಡಿ ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರ ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ 13:** **ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ & ಸೇವಾ ನಿಯಮಗಳನ್ನು ಅನುಮೋದಿಸುವ ಬಗ್ಗೆ.**

**ನಿರ್ಣಯ13:** ಸಹಕಾರಿಯ ಸಿಬ್ಬಂದಿ ವೃಂದ ಬಲ & ಸಿಬ್ಬಂದಿಗೆ ಕೊಡಲಾಗುವ ವೇತನ ಶ್ರೇಣಿ ಪರಿಗಣನೆ & ಸೇವಾ ನಿಯಮಗಳ ಬಗ್ಗೆ ಸಹಕಾರಿಯ ಮಾನ್ಯ ಅಧ್ಯಕ್ಷರು ಮಂಡಿಸುತ್ತ ಈ ಹಿಂದೆ ಇದ್ದಂತೆ ಎಲ್ಲಾ ನಿಯಮಗಳನ್ನು ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ನಿ,. ಬೆಂಗಳೂರು ಇದರ ಮಾದರಿ ಸೇವಾ ನಿಯಮದಂತೆ ರೂಪಿಸಲಾಗಿದೆ ಎಂದು ತಿಳಿಸುವುದರ ಮುಖಾಂತರ ಈ ವಿಷಯವನ್ನು ಮಂಡಿಸಿದರು ಹಾಗೂ ಎಪ್ರಿಲ್ 1, **2022** ರಿಂದ ಅನ್ವಯವಾಗುವಂತೆ ಎಲ್ಲಾ ಸಿಬ್ಬಂದಿಗೂ ಕರ್ನಾಟಕ ರಾಜ್ಯ ವೇತನ ಆಯೋಗ 6 ರ ಶೀಫಾರಸ್ಸಿನಂತೆ 7 ಹಂತದ ಶೇಣಿಯಲ್ಲಿ ವೇತನ ನೀಡಲು ಸಹಕಾರಿಯ ಆಢಳಿತ ಮಂಡಳಿಯ ದಿನಾಂಕ 22/07/2022 ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಈ ಮಹಾಸಭೆಯಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರು

ಓದಿ ಹೇಳಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರ ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ 14: ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಅಂಗೀಕರಿಸುವ ಕುರಿತು.**

**ನಿರ್ಣಯ14:** ಠೇವಣಿ ಹಾಗೂ ಸಾಲದ ನಿಯಮಗಳನ್ನು ಮರು ಪರಿಶೀಲಿಸಿ ಸಹಕಾರಿಯ ಸದಸ್ಯರಿಗೆ ಅನುಕೂಲ ಮಾಡಿಕೊಡಲು ಹಾಗೂ ಪ್ರಸಕ್ತ ನಿಯಮಗಳನ್ನು ಪಾಲಿಸಲು ಸಭೆಗೆ ವಿವರಣೆಯೊಂದಿಗೆ ಠೇವಣಿ ಹಾಗೂ ಸಾಲದ ನಿಯಮಗಳ ಪುಸ್ತಕವನ್ನು ಸವಿಸ್ತರವಾಗಿ ಈ ಮಹಾಸಭೆಯಲ್ಲಿ ಸಹಕಾರಿಯ ನಿರ್ದೇಶಕರಾದ ಆರ್ ಎಮ್ ವೀರೇಶ್ ಸ್ವಾಮಿ ಓದಿ ಹೇಳಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರ ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ 15: ಸಹಕಾರಿಯ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಸಂಭಂದಿ ಸಿಬ್ಬಂದಿಗಳ ನೇಮಕವಾದ ಕುರಿತು**

**ನಿರ್ಣಯ15: ಅಂತಹ ಯಾವುದೇ ನೇಮಕಾತಿ ಆಗಿರುವುದಿಲ್ಲಾ.**

**ವಿಷಯ 16: ಸಹಕಾರಿಯ ಉಪವಿಧಿ ಸಂಖ್ಯೆ–28ರ ಪ್ರಕಾರ ನಿಗದಿ ಪಡಿಸಿದ ಉಳಿದ ವಿಷಯಗಳ ಬಗ್ಗೆ ಚರ್ಚೆ**

**ನಿರ್ಣಯ16: ಈ ಕೆಳಗಿನ ವಿಷಯಗಳು ಸವಿಸ್ತಾರವಾಗಿ ಸಭೆಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕರಿಗಳು ಮಂಡಿಸಿದರು.**

- ✓ **ಕಾರ್ಯಚರಣೆಯಲ್ಲಿ ಕೊರತೆ ಏನಾದರು ಇದ್ದಲ್ಲಿ ಅದರ ಪುನರಾವಲೋಕನ.**

  ಅಂತಹ ಕೊರತೆ ಯಾವುದು ಇರುವುದಿಲ್ಲ.

- ✓ **ದೀರ್ಘಾವಧಿಯ ಯೋಜನೆಗಲು ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಗಳ ಅನುಮೋದನೆ.**

  6) ಮುಂಬರುವ ದಿನಗಳಲ್ಲಿ ಸಹಕಾರಿಯ ಸ್ವಂತ ಕಟ್ಟಡ ಕಟ್ಟಲು, ಅದಕ್ಕಾಗಿ ಕಾರ್ಯ ಯೋಜನೆ ರೂಪಿಸಲು ಮುಂದಿನ ಮೂರು ವರ್ಷಗಳ ದೀರ್ಘಾವಧಿಯ ಯೋಜನೆ ಮಾಡಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲು ಹಾಗೂ ಈ ಸಮಿತಿಗೆ ಸಹಕಾರಿಯ ಹೋಸ ಕಟ್ಟಡ ಕಟ್ಟಲು ಅದಕ್ಕೇ ರೂಪು–ರೇಷೆಯನ್ನು, ಕಟ್ಟಡದ ವಾಸ್ತವಿಕ ವೆಚ್ಚವನ್ನು ಅಂದಾಜಿಸಲು ಇದಕ್ಕೆ ಸಂಭಂದಿದಂತೆ ಕೆಲಸಕಾರ್ಯಗಳನ್ನು ನಿರ್ವಹಿಸಲು ಯೋಜನೆ ರೂಪಿಸಲು ಸಭೆಯ ಅನುಮೋದನೆ ಕೋರಿರುತ್ತದೆ.

  7) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಶಾಖೆಗಳನ್ನು ಆರಂಭಿಸಲು ಸಭೆಯ ಅನುಮೋದನೆಗೆ ಕೋರಿರುತ್ತದೆ.

  8) ಮುಂಬರುವ ದಿನಗಳಲ್ಲಿ ಸಹಕಾರಿಯ ಸದಸ್ಯರಿಗೆ ಅನುಕೂಲಕ್ಕಾಗಿ ಸಹಕಾರಿಯಿಂದ ಪೂರಕ ಸಂಸ್ಥೆಗಳನ್ನು ಆರಂಭಿಸಲು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಸಭೆಯ ಅನುಮೋದನೆಯನ್ನು ಕೋರುತ್ತದೆ.

- ✓ **ಮೀಸಲು ನಿಧಿ ಮತ್ತು ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪುನರಾವಲೋಕನ.**

  **ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi) ಪ್ರಕಾರ**

  ಎ) **<u>ಮಿಸಲು ನಿಧಿ:</u>** ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 25% ವನ್ನು ತೆಗೆದು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

  **<u>ಈ ನಿಧಿಯ ಬಳಕೆ:</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3) ರಂತೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxii) ಪ್ರಕಾರ ಬಳಸಬಹುದಾಗಿರುತ್ತದೆ. ಇದುವರೆಗೂ ಮೀಸಲು ನಿಧಿಯನ್ನು ಬಳಸಿರುವುದಿಲ್ಲ, ಮುಂಬರುವ ದಿನಗಳಲ್ಲಿ ಸೌಹಾರ್ದ ಕಾಯ್ದೆಯ ಪ್ರಕಾರ ಹಾಗೂ ಸಹಕಾರಿಯ ಉಪಪವಿಧಿಯ ಪ್ರಕಾರ ಸಹಕಾರಿಯ ಕಟ್ಟಡ ನಿರ್ಮಾಣಕ್ಕೆ ಶೇ.80% ರಷ್ಟನ್ನು ಬಳಸಲು ಸಭೆ ಅನುಮೋದನೆಗೆ ಕೋರಿದೆ.

  ಬಿ) **<u>ಸಹಕಾರ ಶಿಕ್ಷಣ ನಿಧಿ:</u>** ಸಹಕಾರಿಯು ಈ ನೀದಿಯನ್ನು ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 2% ನ್ನು ಈ ನಿಧಿಗೆ ವಿನಿಯೋಗ ಮಾಡುವುದು.

  **<u>ಈ ನಿಧಿಯ ಬಳಕೆ:</u>** ಈ ಸಹಕಾರ ಶಿಕ್ಷಣ ನಿಧಿಯನ್ನು ಸಹಕಾರಿಯ ಉಪವಿದಿ 76(1) ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ರೂಪಾದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ನಿಗದಿ ಪಡಿಸಿದ ಅವಧಿಯೋಳಗೆ ಪಾವತಿಸುವುದು.

  ಸಿ) **<u>ಅನಿರೀಕ್ಷಿತ ನಷ್ಟಗಳು, ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣೆಗೆ ಮೀಸಲು ನಿಧಿ</u>** : ಸಹಕಾರಿಯು ರಚಿಸಿದ ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 20% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3),75(1),75(2)ರಂತೆ ಬಳಸಬಹುದಾಗಿರುತ್ತದೆ.

ಡಿ) **ಸಾಮಾನ್ಯ ಕ್ಷೇಮ ನಿಧಿ:** ಸಹಕಾರಿಯು ರಚಿಸಿದ ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 5% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(1),74(2),74(3),75(1),75(2),ರಂತೆ ಬಳಸಬಹುದಾಗಿರುತ್ತದೆ.

ಇ) **ಸಹಕಾರಿ ಅಕಾಡೆಮಿ ಮೈಸೂರ್ ನಿಧಿ:** ಸಹಕಾರಿಯು ರಚಿಸಿದ ಈ ನಿಧಿಗೆ ಪ್ರಸಕ್ತ ವರ್ಷದಿಂದ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭ ವಿನಿಯೋಗದಲ್ಲಿ ಶೇ. 0.50% ವನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ:** ಈ ಸಹಕಾರಿ ಅಕಾಡೆಮಿ ಮೈಸೂರ್ ನಿಧಿಯನ್ನು ಸಹಕಾರಿಯು ಉಪವಿದಿ 76(1) ರಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ **ಸಹಕಾರಿ ಅಕಾಡೆಮಿ ಮೈಸೂರ್ ಸ್ಥಾಪಿಸಲು** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕರಿಯ ಸೂಚನೆಯಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ನಿಗದಿ ಪಡಿಸಿದಂತೆ ಪಾವತಿಸುವುದು.

ಎಫ್) 1) **ನಿರ್ದೇಶಕರ ಕ್ಷೇಮ ನಿಧಿ:** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ಉಳಿದರೆ ಶೇ. 1% ನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 75(3)ರಂತೆ ಹಾಗೂ ನಿರ್ದೇಶಕರುಗಳ ಆರೋಗ್ಯ, ಇವರುಗಳ ಆರೋಗ್ಯ ವಿಮೆ ಮಾಡಿಸಲು, ನಿರ್ದೇಶಕರುಗಳ ಪ್ರವಾಸಕ್ಕೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

2) **ಸಿಬ್ಬಂಧಿ ಕ್ಷೇಮ ನಿಧಿ :** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ಉಳಿದರೆ ಶೇ. 5% ವರೆಗೆ ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 75(3)ರಂತೆ ಹಾಗೂ ಸಿಬ್ಬಂದಿಗಳ ಆರೋಗ್ಯ, ಇವರುಗಳ ಆರೋಗ್ಯ ವಿಮೆ ಮಾಡಿಸಲು, ಸಿಬ್ಬಂದಿಗಳ ಪ್ರವಾಸಕ್ಕೆ ಮತ್ತು ಸಿಬ್ಬಂದಿಗಳ ಸಹಕಾರಿಯ ಉಪವಿಧಿಯ 63(1),63(2) ಕ್ಕೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

3) **ಕಟ್ಟಡ ನಿಧಿ :** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 72 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಶೇ 20% ನ್ನು ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2) ರಂತೆ ಬಳಸಬಹುದಾಗಿರುತ್ತದೆ.

9) **ಶಿವಪ್ರಿಯ ಸದಸ್ಯರ ಕ್ಷೇಮ ನಿಧಿ :** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ನಂತರ ಉಳಿದರೆ ಪ್ರತೀ ವರ್ಷ ಸಹಕಾರಿಯ ಇತರೆ ನಿಧಿಗಳಲ್ಲಿ ವಿನಿಯೊಗವಾಗಿ ಉಳಿದ ಲಾಭವನ್ನು ಈ ನಿಧಿಗೆ ಶೇ. 0.25 % ರಿಂದ ಶೇ.5% ರೊಳಗೆ ಲಾಭವನ್ನು ವಿನಿಯೋಗ ಮಾಡಲಾಗುವುದು ಹಾಗೂ ಸಹಕಾರಿಯ ಸದಸ್ಯರು ಸಾಲ ಪಡೆದ ಸಂದರ್ಬದಲ್ಲಿ ಸದಸ್ಯರ ಒಟ್ಟು ಸಾಲದ ಮೋತ್ತದ ಶೇ 0.05% ಈ ನಿಧಿಗೆ ವಿನಿಯೋಗ ಮಾಡಲಾಗುವುದು.

**ಈ ನಿಧಿಯ ಬಳಕೆ :** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2),74(3),75(2),ರಂತೆ ಹಾಗೂ ಸಹಕಾರಿಯ ಸದಸ್ಯರುಗಳ ಕಾಲಿಕ ಮರಣ ಹೊಂದಿದಲ್ಲಿ, ಅಥವಾ ಸದಸ್ಯನ ಸಾಮಾಜಿಕ ಜೀವನ ನಡೆಸಲು ದುಸ್ತರವಾದಲ್ಲಿ ಸಹಕಾರಿಯು ಇವರ ಸಾಲದ ಬಾಕಿ ಮೊತ್ತವು ರೂ.50,000/- ಒಳಗಿನ ಸಾಲಕ್ಕೆ ಈ ನಿಧಿಯಲ್ಲಿನ ಲಭ್ಯತೆಗನುಗುಣವಾಗಿ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

10) **ಸಹಕಾರಿಯ ವ್ಯವಹಾರ ಅಭಿವೃದ್ಧಿ ನಿಧಿ:** ಸಹಕಾರಿಯು ರಚಿಸಿದ ಸಹಕಾರಿಯ ಉಪವಿಧಿ 75(3), ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ,1997 ಇದರ ಪ್ರಕರಣ ಸಂಖ್ಯೆ 10(2)(xxi)(ಇ) ಇದರಂತೆ ರಚಿಸಿದ್ದು ಈ

ನಿಧಿಗೆ ಪ್ರತೀ ವರ್ಷ ಸಹಕಾರಿಯ ಮಾಡಿರುವ ಲಾಭದಲ್ಲಿ ಮೋದಲಿಗೆ ಸೂಚಿಸಿದ ಎ,ಬ,ಸಿ,ಡಿ ಗಳ ನಿಧಿಗಳನ್ನು ವಿನಿಯೋಗ ಮಾಡಿ ಹಾಗೂ ಸದಸ್ಯರಿಗೆ ಲಾಭಾಂಶ ಹಂಚಲು ಸಾಕಷ್ಟು ಹಣ ವಿನಿಯೋಗ ಮಾಡಿ ನಂತರ ಉಳಿದರೆ ಪ್ರತೀ ವರ್ಷ ಸಹಕಾರಿಯ ಇತರೆ ನಿಧಿಗಳಲ್ಲಿ ವಿನೋಗವಾಗಿ ಉಳಿದ ಲಾಭವನ್ನು ಈ ನಿಧಿಗೆ ಶೇ 1% ರಿಂದ ಶೇ.2% ರೊಳಗೆ ಅಥವಾ ಉಳಿದ ಲಾಭದ ಭಾಗವನ್ನು ಲಾಭವನ್ನು ವಿನಿಯೋಗ ಮಾಡಲಾಗುವುದು.

**<u>ಈ ನಿಧಿಯ ಬಳಕೆ :</u>** ಈ ನಿಧಿಯನ್ನು ಬಳಸಲು ಸಹಕಾರಿಯ ಉಪವಿಧಿ 74(2),74(3),75(2),ರಂತೆ ಹಾಗೂ ಸಹಕಾರಿಯ ವ್ಯವಹರ ಅಭಿವೃದ್ದಿಗೆ, ತಂತ್ರಜ್ಞಾನ ಅಳವಡಿಕೆಗೆ, ಸಹಕಾರಿಗೆ ಅನುಕೂಲವಾಗುವ ಯಾವುದೆ ಹೊಸ ಯೋಜನೆ ರೂಪುರೇಷಗಳಿಗೆ ಈ ನಿಧಿಯನ್ನು ಬಳಸಬಹುದಾಗಿರುತ್ತದೆ.

- ✓ **ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.**
  ಸಾಲ ಮತ್ತು ಮುಂಗಡಗಳ ನೀಡಿಗೆ ಸದಸ್ಯರುಗಳಿಗೆ ಸರ್ವತ್ರ ಮಿನಿ ಎಟಿಎಮ್ ನೊಂದಿಗಿನ ವ್ಯವಹಾರ, ಈ–ಸ್ಟಾಂಪಿಂಗ್ ಸೇವೆ ಗಳನ್ನು ನೀಡಲಾಗುತ್ತಿದ್ದು ಮುಂಬರುವ ದಿನಗಳಲ್ಲಿ **<u>ಶಿವಪ್ರಿಯ ಜನತಾ ಬಜರ್</u>** ಸ್ಥಾಪಿಸುವುದರ ಮುಖಾಂತರ ಸದಸ್ಯರಿಗೆ ದಿನನಿತ್ಯ ಅವಶ್ಯಕತೆಯ ವಸ್ತುಗಳನ್ನು ಮಾರುಕಟ್ಟೆಯ ಬೆಲೆ ಗಿಂತ ಅತೀ ಕಡಿಮೆ ದರದಲ್ಲಿ ದೊರಕುವಂತೆ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಇದನ್ನು ಸಭೆ ಪರಿಶೀಲಿಸಿ ಸಭೆ ಅನುಮೋದಿಸ ಬೇಕಾಗಿರುತ್ತದೆ.
- ✓ **ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲದ, ಸುಸ್ತಿ ಸಾಲದ ವಸೂಲಿ ಕ್ರಮದ ಪರಿಶೀಲನೆ.**
  ನಿರ್ದೇಶಕರ ಮತ್ತು ಅವರುಗಳ ಸಂಭಂದಿಕರುಗಳಿಗೆ ನೀಡಿರುವ ಸಾಲಗಳು ಎಲ್ಲವೂ ಆಸ್ತಿ ಒತ್ತಿ ಸಾಲ, ವಾಹನ ಸಾಲ, ವಿಮಾ ಪಾಲಸಿ ಒತ್ತಿ ಸಾಲ ಮತ್ತು ಮುದ್ದತು ಠೇವಣಿ ಆಧಾರಿತ ಸಾಲಗಳಾಗಿದ್ದು ಇವುಗಳ ಪ್ರತೀ ನಿರ್ದೇಶಕರು ಶೇ.10% ಕ್ಕಿಂತ ಹೆಚ್ಚಿರುವುದಿಲ್ಲ ಹಾಗೂ ಈ ಎಲ್ಲಾ ಸಾಲಗಳು ನಿಯಮಿತ ಪಾವತಿಯನ್ನು ಹೋದಿದ್ದು ಸುಸ್ತಿಗಿರುವುದಿಲ್ಲ. ಇದನ್ನು ಸಭೆ ಪರಿಶೀಲಿಸಿ ಸಭೆ ಅನುಮೋದಿಸ ಬೇಕಾಗಿರುತ್ತದೆ.
- ✓ **ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.**
  ಸಹಕಾರಿ ಕಾಯ್ದೆ ಅನ್ವಯ ಇಂತಹ ಸುಸ್ತಿ ಸಾಲಗಳ ಮೇಲೆ ದಾವ ಹೂಡಲು ಸಭೆ ಪರಿಶೀಲಿಸಿ ಸಭೆ ಅನುಮೋದಿಸಿತು.
- ✓ **ಮಂಡಳಿಯ ನಿರ್ದೇಶಕರುಗಳನ್ನು ತೆಗೆದ ಹಾಕುವ ಕುರಿತು.**
  ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.
- ✓ **ಸಹಕಾರಿಯು ಇತರೆ ಬ್ಯಾಂಕಿನಲ್ಲಿ ಹೊಂದಿರುವ ಸದಸ್ಯತ್ವದ ವರದಿ.**
  4) ಸಹಕಾರಿಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.
  5) ಸಹಕಾರಿಯು ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ, ರಾಯಚೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.
  6) ಸಹಕಾರಿಯು ರಾಯಚೂರು ಜಿಲ್ಲಾ ಮದ್ಯವರ್ತಿ ಸಹಕರ ಬ್ಯಾಂಕ್ , ರಾಯಚೂರು ಇವರುಗಳಲ್ಲಿ ಸದಸ್ಯತ್ವ ವನ್ನು ಹೊಂದಿದೆ.

ಈ ವಿಷಯವನ್ನು ಸವಿಸ್ತರವಾಗಿ ಈ ಮಹಾಸಭೆಯಲ್ಲಿ ಸಹಕಾರಿಯ ನಿರ್ದೇಶಕರಾದ ಆರ್ ಎಮ್ ವೀರೇಶ್ ಸ್ವಾಮಿ ಓದಿ ಹೇಳಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರ ಚಪ್ಪಾಳೆಯ ಮುಖಾಂತರ ಅನುಮೋದಿಸಿದರು ಮತ್ತು ಇದನ್ನು ಸಹಕಾರಿಯ ಸಿಬ್ಬಂದಿಯು ದಾಖಲಿಸಿದರು.

**ವಿಷಯ 17:** ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.
**ನಿರ್ಣಯ17:** ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ಯಾವುದೇ ವಿಷಯಗಳು ಚರ್ಚೆಗೆ ಬರಲಿಲ್ಲ.

ಸಭೆಗೆ ಆಗಮಿಸಿದ ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು , ಸಹಕಾರಿಯ ಸದಸ್ಯರನ್ನು ಅಥಿತಿಗಳನ್ನು ಹಾಗೂ ಪತ್ರಕರ್ತರನ್ನುಸಹಕಾರಿಯ ನಿರ್ದೇಶಕರಾದ ಶ್ರೀಮತಿ ಕವಿತಾ ಷಣ್ಮುಖಾಚಾರಿ ವಂದನಾರ್ಪಣೆ ಮಾಡುತ್ತಾ ಊಟದೊಂದಿಗೆ ಸಭೆಯ ಕಾರ್ಯಕಲಾಪಗಳು ಮುಕ್ತಾಯಗೊಳಿಸಲಾಯಿರು.

– – – – – * * * * – – – – –

**ಸಹಕಾರಿಯ ಕಾರ್ಯಕಾರಿ ಮಂಡಳಿಯ ಪರವಾಗಿ ಅಧ್ಯಕ್ಷರಿಂದ  ಅಭಿನಂದನೆಗಳು**

- ಸಹಕಾರಿಯ ಮೇಲೆ ವಿಶ್ವಾಸ ವಿಟ್ಟು ತಮ್ಮ ಠೇವಣಿಗಳನ್ನು ತೊಡಗಿಸಿದ ಎಲ್ಲಾ ಠೇವಣಿದಾರರಿಗೆ, ಸದಸ್ಯರಿಗೆ ನಮ್ಮ ಆಢಳಿತ ಮಂಡಳಿಯ ಹಾಗೂ ಸಿಬ್ಬಂದಿಯ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು.
- ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇದರ ಆಢಳಿತ ಮಂಡಳಿ ಹಾಗೂ ಸರ್ವ ಸಿಬ್ಬಂದಿ ವರ್ಗದವರ ತರಬೇತಿ ಹಾಗೂ ಮಾರ್ಗದಶನಕ್ಕಾಗಿ ನಮ್ಮ ಆಢಳಿತ ಮಂಡಳಿಯ, ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರ ಪರವಾಗಿ ಅಭಿನಂದನೆಯನ್ನು ತಿಳಿಸುತ್ತೇನೆ.
- ಸನ್ 2023–24ನೇ ಸಾಲಿನ ಶಾಸನ ಬದ್ದ ಲೆಕ್ಕ ತಪಾಸಣೆಯನ್ನು ಲೆಕ್ಕ ಪರಿಶೋಧಕರು **ಶ್ರೀನಿವಾಸ ನೆಲಜೇರಿ & ಕಂ., ಹೊಸಪೇಟೆ,** ಸಿ. ಎ. **ಶ್ರೀನಿವಾಸ ನೆಲಜೇರಿ, ಸನ್ನದು ಲೆಕ್ಕ ಪರಿಶೋಧಕರು, ಹೊಸಪೇಟೆ,** ಇವರು ಲೆಕ್ಕ ಪರಿಶೋಧನೆಯನ್ನು ಮಾಡಿ  ಯೋಗ್ಯ ಮಾರ್ಗದರ್ಶನವನ್ನು  ನೀಡಿರುತ್ತಾರೆ. ಕಾರಣ ಅವರಿಗೆ ನಮ್ಮ ಆಢಳಿತ ಮಂಡಳಿಯ, ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರ ಪರವಾಗಿ ಅಭಿನಂದನೆಯನ್ನು ತಿಳಿಸುತ್ತೇನೆ.
- ಸಹಕಾರಿಯ ಸಭೆಗಳಿಗೆ ನಿರ್ದೇಶಕರು ಹಾಜರಾಗಿ ಸಹಕಾರಿಯ ಕಾರ್ಯಕಲಾಪಗಳನ್ನು ಆಸಕ್ತಿ ಹಾಗೂ ಶ್ರದ್ದೆಯಿಂದ ಕಾರ್ಯ ನಿರ್ವಹಿಸಿದ್ದಕ್ಕಾಗಿ ಹಾಗೂ ಸಹಕಾರಿಯ ಸರ್ವತೋಮುಖ ಅಭಿವೃದ್ದಿಗಾಗಿ , ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡಿ ಸಭೆಗಳಲ್ಲಿ ನಿರ್ಣಯ ತೆಗೆದುಕೊಳ್ಳಲು ಸಹಕಾರಿಯಾಗಿರುತ್ತಾರೆ. ಈ ಎಲ್ಲಾ ಅಭಿವೃದಿಗೆ ಕಾರಣೀಭೂತರಾದ ನಿರ್ದೇಶಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.
- ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನ್ವಿ, ಇದರ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಹಾಗೂ ಎಮ್.ಪಿ.ಎಸ್.ಎಸ್.ಬ್ಯಾಂಕ್ ಮಾನ್ವಿ ಇದರ ಸಿಬ್ಬಂದಿವರ್ಗ, ಆರ್.ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲ್ ತೊರಣದಿನ್ನಿ ಹಾಗೂ ಆರ್.ಡಿ.ಸಿ.ಸಿ. ಬ್ಯಾಂಕ್‌ನ ಸಿಬ್ಬಂದಿವರ್ಗ, ಬೀಳಿಗಿ ಪಟ್ಟಣ ಸಹಕಾರಿ ಬ್ಯಾಂಕ ಮಾನ್ವಿ, ಎಸ್.ಬಿ.ಐ ಬ್ಯಾಂಕ್ ಮಾನ್ವಿ,  ಮತ್ತು ಐ.ಸಿ.ಐ.ಸಿಐ ಬ್ಯಾಂಕ್, ಸುಕೊ ಬ್ಯಾಂಕ್ ಮಾನವಿ ಶಾಖೆ ಮತ್ತು ವಿಕಾಸ್ ಬ್ಯಾಂಕ್ ಸಿಂಧನೂರ್ ಶಾಖೆ , ಕೆನರ ಬ್ಯಾಂಕ್ ಮಾನವಿ ಶಾಖೆ ಮತ್ತು ಯುನಿಯನ್ ಬ್ಯಾಂಕ್ ಆಫ್ ಇಂಡಿಯ ಮಾನವಿ ಶಾಖೆ ಈ ಎಲ್ಲಾ ಬ್ಯಾಂಕುಗಳ ಹಾಗೂ ಮಾನವಿ ಪಟ್ಟಣದ ಎಲ್ಲಾ ಸಹಕಾರಿ ಸಂಘ/ಸೌಹಾರ್ದ ಸಹಕಾರಿಯ ಅಧ್ಯಕ್ಷರು ,ನಿರ್ದೇಶಕ ಮಂಡಳಿ  ವ್ಯವಸ್ಥಾಪಕರಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.
- ಮಾನ್ಯ ರಾಯಚೂರು ಪ್ರಾಂತೀಯ ಸಹಕಾರಿ ಸಂಘಗಳ ಜಂಟಿ ನಿಬಂಧಕರಿಗೆ ಹಾಗೂ ಉಪ ನಿಭಂದಕರಿಗೆ ಹಾಗೂ ಸಹಾಯಕ ನಿಭಂದಕರಿಗೆ ಮತ್ತು ಸಹಕಾಯಕ ನಿರ್ದೇಶಕರು ಲೆಕ್ಕ ಪರಿಶೋಧನೆ ಇಲಾಖೆ ರಾಯಚೂರು ಇವರುಗಳಿಗೆ ಅಭಿನಂದಿಸುತ್ತೇವೆ.
- ಸಹಕಾರಿ ಏಳ್ಗೆಯಲ್ಲಿ ಅತ್ಯಂತ ಮಹತ್ವದ ಪಾತ್ರ ಸಿಬ್ಬಂದಿ ವರ್ಗದವರದು. ಉತ್ಸಾಹಿ ಹಾಗೂ ಅರ್ಪಣಾ ಮನೋಭಾವನೆದಿಂದ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಒಟ್ಟಾರೆ ಪ್ರಯತ್ನದ ಫಲವಾಗಿ ಸಹಕಾರಿಯು ಆರಂಭದಿಂಲ್ಲೇ ಪ್ರಗತಿಯನ್ನು ಸಾಧಿಸಿದೆ. ಕಾರಣ ಅವರಿಗೆ ನಮ್ಮ ಆಢಳಿತ ಮಂಡಳಿಯ ಹಾಗೂ ಸರ್ವ ಸದಸ್ಯರ ಪರವಾಗಿ ಅಭಿನಂದನೆಯನ್ನು ತಿಳಿಸುತ್ತೇವೆ.
- ಸಹಕಾರಿಯ ಉನ್ನತಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಬೆಂಬಲ ಹಾಗೂ ಸಹಕಾರವನ್ನು ನೀಡಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸಿ ಮತ್ತೊಮ್ಮೆ ಎಲ್ಲರಿಗೂ ವಂದಿಸಿ ಈ ವರದಿಯನ್ನು ಮುಕ್ತಾಯಗೊಳಿಸುತ್ತೇವೆ.

ಕಾರ್ಯಕಾರಿ ಮಂಡಳಿಯ ಪರವಾಗಿ

**ಶ್ರೀ ಜಾಕೀರ ಮೋಹಿಯುದ್ದಿನ್**

**ಅಧ್ಯಕ್ಷರು**